## ಅಧ್ಯಾಯ 3

# ಪಂಗಡಗಳಿಂದ ಆಗುವ ಗಂಭೀರ ಪರಿಣಾಮಗಳು

ಕೊರಿಂಥದಲ್ಲಿರುವ ಕ್ರೈಸ್ತರ ಮಧ್ಯದಲ್ಲಿ ಇರುವ ಪಂಗಡಗಳು ಲೋಕವು ವ್ಯಾಖ್ಯಾನಿಸುವ ಜ್ಞಾನದ ಮೇಲೆ ಇರಿಸಿದ ತಪ್ಪಾದ ವಿಶ್ವಾಸವನ್ನು ಸಾಕ್ಷೀಕರಿಸಿದ್ದು. ಕೊರಿಂಥಲ್ಲಿ ಹರಡಿರುವ ಹುಚ್ಚುತನವಾದ ಜ್ಞಾನ ದೇವರ ಜ್ಞಾನದೊಂದಿಗೆ ವಿಭಿನ್ನವಾಗಿ ನಿಂತುಕೊಂಡಿತು, ಆದರೆ ಸಭೆಯಲ್ಲಿರುವ ಗಲಭೆಗಳು ಸೂಚಿಸಿದ ಸಮಸ್ಯೆಗಳು ಪ್ರಾಪಂಚಿಕ-ಬುದ್ಧಿವಂತರ ಮೋಹವರವಶತೆಗಿಂತ ಆಳವಾಗುತ್ತಾ ಹೋದವು. ಶರೀರಾಧೀನ ಸ್ವಭಾವದಿಂದ ಹುಟ್ಟಿದ ವಿಭಾಗಿಸುವ ಆತ್ಮವು ಅವರನ್ನು ಲೋಕದ ಮೌಲ್ಯಗಳೆಡೆಗೆ ನಡೆಸುತಿತ್ತು. ಅವರಲ್ಲಿ ಕೆಲವು ಕ್ರೈಸ್ತರು ಕ್ರಿಸ್ತನ ಆತ್ಮವು ತಮ್ಮ ಹೃದಯದೊಳಗೆ ಕಾರ್ಯಮಾಡಲು ಅನುಮತಿಸುವಲ್ಲಿ ವಿಫಲರಾದರು. ಸಣ್ಣ ದ್ವೇಷ, ಅಂತಸ್ತಿಗಾಗಿ ಸ್ಪರ್ದೆ ಮತ್ತು ಅಚ್ಚುಮೆಚ್ಚಿನ ಬೋಧಕರ ಆಧಾರದ ಮೇಲೆ ಉದ್ಭವಿಸಿರುವ ತಂಡಗಳ ಆಯ್ಕೆ.

ಕ್ರೈಸ್ತ ಜೀವಿತಕ್ಕೆ ಈ ಶಿಶುಸಂಬಂಧದ ಅನುಸಂಧಾನ, ಸುವಾರ್ತೆಯನ್ನು ದೃಢೀಕರಿಸುವ ಮತ್ತು ಬೇಡಿಕೆಗಳಿಂದ ಗಮನ ಮತ್ತು ಶಕ್ತಿಯನ್ನು ಬೇರೆಕಡೆಗೆ ತಿರುಗಿಸುವದು. ಪಂಗಡಗಳಿಗೆ ನಿಷ್ಠೆ, ಇವುಗಳಿಂದಾಗಿ ಕ್ರಿಸ್ತನ ಕ್ರೂಜೆಯ ಮೇಲೆ ಸಿದ್ಧಾಂತಪಡಿಸಿದ ದೇವರ ಕೃಪೆಯನ್ನು ಪ್ರತಿಫಲಿಸುವದಕ್ಕೆ ಸ್ವಲ್ಪ ಸ್ಥಳವನ್ನು ನೀಡಿತು. ಬದಲಾಗಿ, ನೈತಿಕ ಪರಿಶುದ್ಧತೆಯೊಂದಿಗೆ ಸಂಧಾನ ಮಾಡಿಕೊಂಡು, ಸಹೋದರ ಪ್ರೀತಿಯನ್ನು ಉದಾಸೀನ ಮಾಡುವತ್ತ ನಡೆಸಿತು.

## ಪಂಗಡಗಳು: ಶರೀರಾಧೀನಸ್ವಭಾವದ ಫಲ (3:1-9)

**1ಸಹೋದರರೇ ನಾನಂತೂ ದೇವರಾತ್ಮನಿಂದ ನಡಿಸಿಕೊಳ್ಳುವವರಿಗೆ ತಕ್ಕಂತೆ ನಿಮ್ಮ
ಸಂಗಡ ಮಾತಾಡಲಾರದೆ ಪ್ರಾಪಂಚಿಕರೂ ಕ್ರಿಸ್ತನ ವಿಷಯದಲ್ಲಿ ಎಳೆಗೂಸುಗಳೂ
ಆಗಿರುವಂಥವರಿಗೆ ತಕ್ಕಂತೆ ನಿಮ್ಮ ಸಂಗಡ ಮಾತಾಡಬೇಕಾಯಿತು. 2ನಿಮಗೆ ಹಾಲು
ಕುಡಿಸಿದೆನು, ಅನ್ನಾ ಕೊಡಲಿಲ್ಲ; ಅನ್ನಾ ತಿನ್ನುವದಕ್ಕೆ ನಿಮಗೆ ಇನ್ನೂ ಶಕ್ತಿ ಇರಲಿಲ್ಲ.
3ಈಗಲಾದರೂ ಶಕ್ತಿಯಿಲ್ಲ; ಯಾಕಂದರೆ ಇನ್ನೂ ಶರೀರಾಧೀನ ಸ್ವಭಾವವುಳ್ಳವರಾಗಿದ್ದೀರಿ.**

**ನಿಮ್ಮೊಳಗೆ ಹೊಟ್ಟೇಕಿಚ್ಚು ಜಗಳಗಳು ಇರುವಲ್ಲಿ ನೀವು ಶರೀರಾಧೀನಸ್ವಭಾವವುಳ್ಳವರಾಗಿದ್ದು ಕೇವಲ ನರಪ್ರಾಣಿಗಳಂತೆ ನಡೆಯುತ್ತೀರಲ್ಲವೇ.**
**4ಒಬ್ಬನು - ನಾನು ಪೌಲನವನು ಎಂದು ಮತ್ತೊಬ್ಬನು ನಾನು ಅಪೊಲ್ಲೋಸನವನು ಎಂದು ಹೇಳುತ್ತಿರುವಾಗ ನೀವು ಕೇವಲ ನರಪ್ರಾಣಿಗಳಾಗಿದ್ದೀರಲ್ಲವೇ.**

**5ಹಾಗಾದರೆ ಅಪೊಲ್ಲೋಸನು ಏನು? ಪೌಲನು ಏನು? ಅವರು ಸೇವಕರು; ಅವರ ಮುಖಾಂತರ ನೀವು ಕ್ರಿಸ್ತನನ್ನು ನಂಬುವವರಾದಿರಿ; ಕರ್ತನು ಒಬ್ಬೊಬ್ಬನಿಗೆ ದಯಪಾಲಿಸಿದ ಪ್ರಕಾರ ಅವರು ಸೇವೆಮಾಡುವವರಾಗಿದ್ದಾರೆ.**
**6ನಾನು ಸಸಿಯನ್ನು ನೆಟ್ಟೆನು. ಅಪೊಲ್ಲೋಸನು ನೀರುಹೋಯಿದನು. ಆದರೆ ಬೆಳೆಸುತ್ತಾ ಬಂದವನು ದೇವರು.**
**7ಹೀಗಿರಲಾಗಿ ನೆಡುವವನಾಗಲಿ ನೀರು ಹೊಯ್ಯುವವನಾಗಲಿ ವಿಶೇಷವಾದವನಲ್ಲ. ಬೆಳಸುವ ದೇವರೇ ವಿಶೇಷವಾದವನು,**
**8ನೆಡುವವನೂ ನೀರು ಹೊಯ್ಯುವವನೂ ಒಂದೇ ಆಗಿದ್ದಾರೆ. ಆದರೂ ಪ್ರತಿಯೊಬ್ಬನಿಗೆ ಅವನವನ ಕಷ್ಟಕ್ಕೆ ತಕ್ಕಹಾಗೆ ಕೂಲಿಯು ದೊರೆಯುವದು.**
**9ನಾವು ದೇವರ ಜೊತೆ ಕೆಲಸದವರು; ನೀವು ದೇವರ ಹೊಲವೂ ದೇವರ ಕಟ್ಟಡವೂ ಅಗಿದ್ದೀರಿ.**

**ವಚನ 1.** ಕೊರಿಂಥದಲ್ಲಿರುವ ಕ್ರೈಸ್ತರು ಆತ್ಮೀಕ ವರಗಳ ಮೇಲೆ ಶ್ರೇಷ್ಠವಾದ ಮೌಲ್ಯವನ್ನು ಇರಿಸುವದರಲ್ಲಿ ವಿಚಿತ್ರವಾದ ದೃಷ್ಟಿಯನ್ನು ಇರಿಸಿದರು (12:7-10) ಆದರೆ ಆತ್ಮೀಕ ಸಂದೇಶದಕ್ಕೆ ಸ್ವಲ್ಪ ಬೆಲೆಯನ್ನು ನೀಡಿದರು. ಪೌಲನು **ಒಬ್ಬ ಆತ್ಮೀಕ ಮನುಷ್ಯನಾಗಿ ಅವರೊಂದಿಗೆ ಮಾತನಾಡಲಿಲ್ಲ**. ಅಪೊಸ್ತಲನು ತನ್ನನ್ನು ತಾನು ಶರೀರಾಧೀನಸ್ವಭಾವದ ಮನುಷ್ಯನಿಗೆ ಹೊಂದಿಸಿಕೊಂಡನು, ಜನರು ಇನ್ನೂ **ಕ್ರಿಸ್ತನಲ್ಲಿ** ಹಸುಗೂಸುಗಳಾಗಿದ್ದರು, ಅವರ ಎಲ್ಲಾ ಪಂಗಡಗಳು, ಅವರ ಹೋರಾಟಗಳು, ಮತ್ತು ಅವರು ಬಾಲಿಶ ಮಾರ್ಗಗಳು, ಇಂಥಹ ಜನರನ್ನು ಪೌಲನು "ಕ್ರಿಸ್ತನಲ್ಲಿ" ಇರುವವರು ಎಂದು ಸಂಬೋಧಿಸಿದ್ದಾನೆ. ಅಪೊಸ್ತಲನು ಅವರನ್ನು ಕ್ರಿಸ್ತನಂತೆ ಇನ್ನೂ ಮುಂದೆ ತೊರೆದುಬಿಡಲಿಲ್ಲ. ವಿಭಾಗಗಳು ಇದ್ದಾಗ್ಯೂ - ಅವರಲ್ಲಿರುವ ಆಡಂಬರದ ಪ್ರಾಪಂಚಿಕ ಜ್ಞಾನದ ಮೋಹಪರವಶತೆಯಿಂದಾಗಿ ಕೋರಿಂಥದವರು ಅದೇ "ಆತ್ಮೀಕ ಮನುಷ್ಯರಾಗಿ" ಉಳಿದರು. ಪವಿತ್ರಾತ್ಮನು ಅವರಿಗೆ ಸೂಚನೆಗಳನ್ನು ನೀಡುವದನ್ನು ಬಲಪಡಿಸುವದನ್ನು ಮುಂದುವರೆಸಿದನು; ಆದರೆ ಪವಿತ್ರಾತ್ಮನನ್ನು ಹೊಂದಿಕೊಂಡಿದ್ದಾಗಲೂ, ಅವರು ಮತ್ತೆ ಹೊರನೋಟದಲ್ಲಿ ಶರೀರಾಧೀನ ಸ್ವಭಾವವನ್ನು ಅನುಮತಿಸುತ್ತಿದ್ದರು. ಶರೀರಾದೀನಸ್ವಭಾವದ ಮೌಲ್ಯಗಳು ಅವರ ಮನಸ್ಸುಗಳನ್ನು ಪೌಲನು ಇನ್ನೂ ಮುಂದೆ ಅವರನ್ನು ಆತ್ಮೀಕ ಜನರೆಂದು ಸಂಬೋಧಿಸಲು ಆಗದಷ್ಟು ಆಕರ್ಷಿಸಿದ್ದವು.

ಅಪೊಸ್ತಲನು "ಆತ್ಮೀಕ ಮನುಷ್ಯ" ಎಂದು ಗುರುತಿಸಲ್ಪಡುವಂಥ ಯಾವ ಪ್ರಭಾವವನ್ನು ಬೀರಲಿಲ್ಲ, ಅವರು ಮಾತನಾಡುತ್ತಿದ್ದ ವಿಚಿತ್ರವಾದ ಭಾಷೆಯಿಂದಾಗಿ ಅಥವಾ ಆಂತರ್ಯದ ಭಾವನೆಗಳಲ್ಲಿ ಆತ್ಮನ ಉತ್ತೇಜನ. ಪೌಲನಿಗೆ ಆತ್ಮೀಕನಾಗಿ ಅವರೊಂದಿಗೆ ಮಾತನಾಡಲು, ಕೊರಿಂಥದ ಕ್ರೈಸ್ತರು ಪ್ರಭುದ್ಧರಾಗಬೇಕಿತ್ತು. ಕುತರ್ಕಿಗಳು ವ್ಯಾಖ್ಯಿನಿಸುವ ಜ್ಞಾನದಲ್ಲಿ ಕಡಿಮೆ ಆಸಕ್ತಿಯನ್ನು ಇರಿಸುವದು ಪ್ರಭುದ್ಧತೆಯ ಗುರುತಾಗಿತ್ತು. ಅವರು ಯಾವುದೇ ಮಟ್ಟದಲ್ಲಿ ಕ್ರೂಜೆಗೆ ಆತುಕೊಳ್ಳುವಾಗ ಮತ್ತು ಕ್ರಿಸ್ತನನ್ನು ಕರ್ತನೆಂದು ಸೇವೆಮಾಡುವಾಗ, ಅವರು ಆ ಹಂತಕ್ಕೆ ತಮ್ಮ ಶಿಶುಸ್ವಭಾವದ ಮಾರ್ಗಗಳನ್ನು ಬದಿಗಿಡುತ್ತಾರೆ. ಅಚ್ಚುಮೆಚ್ಚಿನ ಪಂಗಡಗಳನ್ನು ಬೆಂಬಲಿಸುವ ದಾಹವನ್ನು ತೆಗೆದುಹಾಕಿ ತನ್ನ

ಓದುಗರಲ್ಲಿ ಪ್ರಭುದ್ಧತೆಯನ್ನು ಕಾಣುವದು ಪೌಲನ ಬಯಕೆಯಾಗಿತ್ತು.

**ವಚನ 2.** ಸ್ತ್ರೀಲಿಂಗವನ್ನು ತನಗೆ ಅಳವಡಿಸಿಕೊಳ್ಳುವದರಲ್ಲಿ ಪೌಲನಿಗೆ ನೆಮ್ಮದಿ ಇದೆ. ಥೆಸಲೋನಿಕದವರಿಗೆ, ಅವನು ಒಬ್ಬ ಮೃದುವಾದ ಪೊಷಕ (1 ಥೆಸಲೋನಿಕ 2:7; KJV); ಕೊರಿಂಥದವರಿಗೆ, ಅವನು ವಿಶ್ವಾಸಿಗಳಿಗೆ **ಕುಡಿಯುವದಕ್ಕೆ ಹಾಲನ್ನು** ಕೊಡುವ ತಾಯಿಯಂತೆ. ಬಹುಶಃ ಪೌಲನ ಹದಿನೆಂಟು ತಿಂಗಳು ಕೊರಿಂಥದಲ್ಲಿ ನೆಲೆಸಿ ಮೂರು ವರ್ಷಗಳು ಕಳೆದಿರಬಹುದು (ಅ.ಕೃ. 18:11). ತನ್ನ ಈ ಸಮಯದಲ್ಲಿ ಅಲ್ಲಿ ಅವನು ಕ್ರೈಸ್ತ ಸಿದ್ಧಾಂತದ ಅಸ್ತಿವಾರವನ್ನು ಹಾಕಿದನು. ಅವನು ಕೊರಿಂಥದವರನ್ನು ನಂಬಿಕೆಯತ್ತ ನಡೆಸಿದನು: "ಕ್ರೂಜಿತನಾದ ಕ್ರಿಸ್ತನನ್ನು" (1 ಕೊರಿಂಥ 2:2). "ನಿರ್ಜೀವಕರ್ಮಗಳ ಕುರಿತು ಪಶ್ಚಾತ್ತಾಪ" "ಸತ್ತವರಿಗೆ ಪುನರುತ್ಥಾನ" ಮತ್ತು "ನಿತ್ಯವಾದ ನ್ಯಾಯತೀರ್ಪು" (ಇಬ್ರಿಯ 6:1, 2 ನೋಡಿರಿ). ಅವರ ಆತ್ಮೀಕ ಪ್ರಯಾಣದ ಪ್ರಾರಂಭದಲ್ಲಿ ಅವರು ನಂಬಿಕೆಯಲ್ಲಿ ಹೊಸಬರಾಗಿದ್ದರು, ಕ್ರಿಸ್ತನಲ್ಲಿ ಶಿಶುಗಳಾಗಿದ್ದರು. ಅವನು ಅವರಿಗೆ ಮೂಲ ಅಸ್ತಿವಾರಗಳಾದ, ಸುವಾರ್ತೆಯ ಹಾಲನ್ನು ಉಣಿಸಿದನು. ಅವರಲ್ಲಿ ಬೆಳವಣಿಗೆಗೆ ಸ್ಥಳವಿತ್ತು, ಅವರು ಕ್ರಿಸ್ತನಲ್ಲಿ ಬೆಳೆಯಬೇಕಾಗಿತ್ತು, ಆದರೆ ಅವರು ತಮ್ಮನ್ನು ತಾವು ಸಭೆಯಲ್ಲಿ ಐಕ್ಯತೆಯನ್ನು ತರುವ ಸಂಗತಿಗಳಿಗೆ ಮನಸ್ಸನ್ನು ತಿರುಗಿಸುವಲ್ಲಿ ನಿರ್ಧಾರ ತೆಗೆದುಕೊಳ್ಳಲು ಅನುಮತಿಸಲಿಲ್ಲ.

ಪೌಲನು ಕೊರಿಂಥದವರಿಗೆ ಸುವಾರ್ತೆಯ ಮೂಲ ಸತ್ಯಗಳ ಸೂಚನೆಗಳ ಮೇಲೆ ಪ್ರತಿಫಲಿಸಲು ಸಲಹೆ ನೀಡಿದ್ದನು. ಕ್ರಿಸ್ತನ ಸಿದ್ಧಾಂತ ಮನುಷ್ಯನ ವಿವೇಚನೆಯನ್ನು ಅದರ ಮಿತಿಯವರೆಗೆ ಹರಡಲು ಪ್ರಶ್ನೆಗಳನ್ನು ಎತ್ತುತ್ತದೆ. ನೈತಿಕ ಸೂಚನೆಗಳು ವಿಶ್ವಾಸಿಗಳಿಗೆ ಸ್ವ-ಪರೀಕ್ಷೆಗೆ ಮತ್ತು ಪಶ್ಚಾತ್ತಾಪಕ್ಕೆ ಕರೆನೀಡುತ್ತವೆ. ಕೊರಿಂಥದಲ್ಲಿರುವ ಕ್ರೈಸ್ತರು ನಂಬಿಕೆಯೆಂಬ **ಗಟ್ಟಿಯಾದ ಆಹಾರವನ್ನು** ಸೇವಿಸುವದಕ್ಕೆ ತಮಗೇ ಸವಾಲನ್ನು ಹಾಕಿಕೊಳ್ಳಲಿಲ್ಲ. ಅವರ ಶರೀರಾಧೀನ ಮಾರ್ಗಗಳು ಅವರನ್ನು ಕ್ರಿಸ್ತನಲ್ಲಿ ಬೆಳೆಯಲು ಮತ್ತು ಪ್ರಭುದ್ದರಾಗಲು ಅಸಮರ್ಥರನ್ನಾಗಿಸಿತು. ಪೌಲನು ತನ್ನ ಓದುಗರಿಗೆ, **ಈಗಲೂ ಸಹ ನೀವು ಸಮರ್ಥರಾಗಿಲ್ಲ**, ನೀವು ಬಾಲಿಶ ಮಾರ್ಗಗಳನ್ನು ಬದಿಗಿರಿಸಿರಿ ಎಂದು ಸವಾಲನ್ನು ಒಡ್ಡುತ್ತಿದ್ದಾನೆ. ಅವನು ಅವರಿಗೆ ಹೆಚ್ಚು ಪ್ರಭುದ್ದವಾದ ನಂಬಿಕೆಯ ತಿಳುವಳಿಕೆಯತ್ತ, ಅದೇರೀತಿಯಲ್ಲಿ ಹೆಚ್ಚು ಪರಿಶುದ್ಧವಾದ ಜೀವಿತಕ್ಕೆ ನಿಮ್ಮನ್ನು ನೀವು ನಡೆಸಿರಿ ಎಂದು ಬೇಡಿಕೊಳ್ಳುತ್ತಾನೆ.

**ವಚನ 3.** ಆತ್ಮನಿಂದ ನಡೆಸಲ್ಪಟ್ಟ ಜನರಾಗಿ ವರ್ತಿಸುವದಕ್ಕಿಂತ (*pneumatikoi*; 3:1), ಅವರು ಶರೀರಾಧೀನಸ್ವಭಾದವರಾಗಿ (*sarkikoi*; 3:3). ಜೀವಿಸುತ್ತಿದ್ದಾರೆ ಎಂದು ಕೊರಿಂಥದವರ ಮೇಲೆ ಪೌಲನು ತಪ್ಪು ಹೊರೆಸುತ್ತಿದ್ದಾನೆ. ಸದಸ್ಯರು ಖಾಸಗಿ ತಿಳುವಳಿಕೆ ಮತ್ತು ಜ್ಞಾನಕ್ಕೆ ಆಕರ್ಷಿತರಾದವರು ಅವನು ತಪ್ಪುಹೊರಿಸಿದ್ದಕ್ಕೆ ಬೇಸರಪಟ್ಟುಕೊಂಡಿರಬಹುದು. ಅವರು ತಮ್ಮನ್ನು ತಾವು ಆತ್ಮೀಕರೆಂದು ತಿಳಿದಿದ್ದಾರೆ. ಅವರು ಪ್ರಭುದ್ದತೆಯನ್ನು ಹೊಂದಬೇಕು. ಹ್ಯಾಗೂ, ಅಪೊಸ್ತಲರು ಅವರು ಇನ್ನೂ **ಶರೀರಾಧೀನರಾಗಿದ್ದಾರೆಂದು** ಸಿದ್ಧಾಂತಪಡಿಸಿದರು. ಅವರ ಅಪ್ರಭುದ್ದತೆಯ ಗುರುತು, **ಹೊಟ್ಟೆಕಿಚ್ಚು ಮತ್ತು ಅವರ ಮದ್ಯದಲ್ಲಿದ್ದ ಜಗಳಗಳು** ಎಂದು ಪೌಲನು ಹೇಳುತ್ತಾನೆ.

ಪೌಲನು ಹೊಸ ಒಡಂಬಡಿಕೆಯ ಯಾವುದೇ ಲೇಖಕನಿಗಿಂದ ಹೆಚ್ಚಾಗಿ "ಶರೀರಾಧೀನ"

(σάρξ, *sarx*) ಎಂಬ ಪದವನ್ನು ಪ್ರತಿಯೊಬ್ಬ ಮನುಷ್ಯನ ಹೃದಯದಲ್ಲಿ ಮರೆಯಾಗಿರುವ ಪಾಪದ ಬಯಕೆಯನ್ನು ಸೂಚಿಸಲು ಉಪಯೋಗಿಸುತ್ತಾನೆ. ಇಂಥಹ ಬಯಕೆಗಳು ಅವರಲ್ಲಿ ಒಟ್ಟಾರೆ ಅಥವಾ ಹೆಚ್ಚು ಸ್ಪಷ್ಟವಾದ ಮಾರ್ಗದಲ್ಲಿ ಪ್ರಕಟವಾಗಿವೆ. "ಶರೀರ" ದ ಕುರಿತು ಜೆ.ಎ. ಮ್ಯಾಟೀಯರ್ ಹೀಗೆ ಬರೆಯುತ್ತಾರೆ "ಇದು ಪಾಪಮಯಸ್ವಭಾವದ ಕ್ರಿಯಾಶೀಲ ತತ್ವವಾಗಿದೆ"[1] ಅವರು ಗಲಿಬಿಲಿಯಲ್ಲಿರುವವರೆಗೆ. ಒಬ್ಬರೊಂದಿಗೆ ಒಬ್ಬರು ಸ್ಪರ್ದಿಸುವದು ಮತ್ತು ತಮ್ಮಲ್ಲಿ ಯಾರು ಜ್ಞಾನವನ್ನು ಕಂಡುಹಿಡಿದರು ಎಂಬ ವಿಷಯದಲ್ಲಿ ವಾದಿಸುವವರೆಗೆ ಅವರನ್ನು ಕರ್ತನ ಸಮೀಪಕ್ಕೆ ನಡೆಸುವದು ಪೌಲನಿಗೆ ಕಠಿಣವಾಗಿದೆ. ಅವರು ತಮ್ಮನ್ನು ತಾವು ಶಾರೀರಿಕ, ಆತ್ಮೀಕವಲ್ಲದ ಕಡೆಗೆ ತಮ್ಮನ್ನು ತಾವು ತೋರಿಸುತ್ತಿರುವ ಮಾರ್ಗ, ಪೌಲನಿಗೆ ಆಶ್ಚರ್ಯವನ್ನುಂಟು ಮಾಡಿತು. ಪ್ರಾರಂಭದಿಂದಲೇ ಅವರು ಶರೀರಾಧೀನರಾಗಿದ್ದರು. ಅವರು ಕ್ರಿಸ್ತನಲ್ಲಿ ಹೊಸದಾಗಿ ಹುಟ್ಟಿದ ಮಗುವಿನಂತೆ ಇದ್ದಾಗಲೇ ಇದನ್ನು ಹೆಚ್ಚಾಗಿ ತಿಳಿದುಕೊಳ್ಳಬಹುದು. ಈಗ, ವರ್ಷಗಳ ನಂತರ, ಪೌಲನು ಹೆಚ್ಚು ಪ್ರಭುದ್ದತೆಯತ್ತ ಅತೀಯಾದ ಅಪೇಕ್ಷೆಯನ್ನು ಇಟ್ಟಿಲ್ಲ. ಅವನು ಸನ್ನಿವೇಶದಿಂದ ಹಿಂದಕ್ಕೆ ಹೋಗಲು ಮತ್ತು ತಮ್ಮನ್ನು ತಾವು ತೀರ್ಪುಮಾಡಿಕೊಳ್ಳಲು ಅವರನ್ನು ಕೇಳಿಕೊಳ್ಳುತ್ತಾನೆ. **ನೀವು ಸಾಮಾನ್ಯ ಮನುಷ್ಯರಂತೆ ನಡೆಯುತ್ತಿಲ್ಲವೋ?** ಅವನು ಪ್ರಶ್ನಿಸುತ್ತಾನೆ.

**ವಚನ 4.** ಪೌಲನು ಕೊರಿಂಥದಲ್ಲಿರುವ ಕ್ರೈಸ್ತರನ್ನು ಸತ್ಯಸಂಗತಿಗಳೊಂದಿಗೆ ಎದುರಿಸುತ್ತಿದ್ದಾನೆ: ಜ್ಞಾನದ ಅನ್ವೇಷಣೆ ಮತ್ತು ಕಲಿಯುವಿಕೆಯಲ್ಲಿ ಅದು ದೇವರ ಪ್ರಕಟನೆಯಲ್ಲಿ ನುರಿಯದ ಹೊರತು ಅದಕ್ಕೆ ಬೆಲೆ ಇರುವದಿಲ್ಲ (2:6). **ನಾನು ಪೌಲನವನು** ಮತ್ತು **ನಾನು ಅಪೊಲ್ಲೋಸನವನು** ಎಂಬ ಹೇಳಿಕೆಯ ಮೇಲೆ ಪಂಗಡಗಳು ರಚಿಸಲ್ಪಡುವ ವರೆಗೆ ಕೊರಿಂಥದವರು ಆತ್ಮೀಕವಾಗಿ ಎಳೆಗೂಸುಗಳಂತಿದ್ದಾರೆ. ಈ ಹಿಂದೆ, ಅಪೊಸ್ತಲರು ನಾಲ್ಕು ಹೆಸರಗಳನ್ನು ನೀಡಿದ್ದನು "ಪೌಲ," "ಅಪೊಲ್ಲೋಸ," "ಕೇಫ" ಮತ್ತು "ಕ್ರಿಸ್ತನು" (1:12 ರಲ್ಲಿರುವ ವಿಮರ್ಶೆಯನ್ನು ನೋಡಿರಿ). ಪಟ್ಟಿಯಲ್ಲಿ ಇಬ್ಬರು ಮನುಷ್ಯರನ್ನು ಕಡಿಮೆ ಮಾಡಿದ್ದು ಕೊರಿಂಥದಲ್ಲಿರುವ ಪಂಗಡಗಳು ಪೌಲನು ಅಥವಾ ಅಪೊಲ್ಲೋಸನಿಗೆ ಆದ್ಯತೆ ನೀಡುವುದರ ಮೇಲೆ ಕೇಂದ್ರಿಕೃತವಾಗಿದ್ದವು. ಪೌಲನು ವಾಕ್ಚಾತುರ್ಯದಲ್ಲಿ ಕೊರತೆಯನ್ನು ಹೊಂದಿದ್ದನು (2 ಕೊರಿಂಥ 11:6). ಅಪೊಲ್ಲೋಸ ವಿದ್ಯಾವಂತನು ಮತ್ತು ವಾಕ್ಚಾತುರ್ಯ ಹೊಂದಿದವನು ಆಗಿದ್ದನು, ವೇದವಾಕ್ಯದಲ್ಲಿ ಪರಿಣಿತನಾಗಿದ್ದನು (ಅ.ಕೃ. 18:24). ಕೇಫನು ಕೊರಿಂಥದಲ್ಲಿ ಇದ್ದನು ಎಂಬ ವಿಚಾರ ಕ್ರಿಸ್ತನು ಅಲ್ಲಿಗೆ ಹೋಗಿದ್ದನು ಎಂಬ ವಿಚಾರಕ್ಕಿಂತ ಅಸಂಭವನೀಯವಾಗಿದೆ. ಕೇಫನು 3:22ರಲ್ಲಿ ಮತ್ತೆ ಕಾಣಿಸಿಕೊಳ್ಳುತ್ತಾನೆ, ಆದರೆ ಪಂಗಡಗಳ ಪ್ರತಿನಿಧಿಯಾಗಿ ಅಲ್ಲ.[2]

ಅವರ ಅಂತಿಮ ಪ್ರಶ್ನೆ, **ನೀನು ಒಬ್ಬ ಸಾಮಾನ್ಯ ಮನುಷ್ಯನೋ?** ಪೌಲನು ಸಹಜವಾಗಿ ಮಾನವ ಬೋಧಕರಿಗೆ ಅವರ ನಿಷ್ಠೆಯನ್ನು ಜೋಡಿಸುತ್ತಾನೆ. ಅವರು ಕ್ರಿಸ್ತನಿಂದ ಪ್ರಭಾವಿತರಾಗದೇ ಇರುವ ಲೋಕದ ಜನರಂತೆ ವರ್ತಿಸುತ್ತಾರೆ. ಅವರ ಒಟ್ಟಾರೆ ನಡತೆ ಅವರು ಆತ್ಮೀಕರಲ್ಲ, ಅವರು ಸಂಪೂರ್ಣವಾಗಿ ಶರೀರಾಧೀನಸ್ವಭಾವಗಳಿಗೆ ದಾಸರಾಗಿದ್ದಾರೆ ಎಂಬುದನ್ನು ತೋರಿಸುತ್ತದೆ. ಅವರು ಕ್ರಿಸ್ತನ ದೇಹದಲ್ಲಿ ಅವಶ್ಯವಾಗಿ ಇರಬೇಕಾದ ಐಕ್ಯತೆಗೆ ಮೆಚ್ಚಿಕೆಯನ್ನು ವ್ಯಕ್ತಪಡಿಸುವದಿಲ್ಲ (1:10).

**ವಚನ 5.** ಗ್ರೀಕ ನಕಾರಾತ್ಮಕ ಸರ್ವನಾಮ ಪುಲ್ಲಿಂಗ (τίς, *tis*, "ಯಾರು")

ಸಾಮಾನ್ಯವಾಗಿ ನಪೂಸಕಲಿಂಗದೊಂದಿಗೆ (τί, *ti*, "ಏನು?") ಪರಸ್ಪರ ಬದಲಾವಣೆಯಾಗುತ್ತದೆ. ಓದುಗರು ಪೌಲನು ಪುಲ್ಲಿಂಗವನ್ನು ಉಪಯೋಗಿಸಿಲಿ ಎಂದು ಅಪೇಕ್ಷಿಸಿರಬಹುದು **ಅಪೊಲ್ಲೋಸನು ಏನು? ಮತ್ತು ಪೌಲನು ಏನು?** ಒಂದುವೇಳೆ ಅಪೊಸ್ತಲನು ಪುಲ್ಲಿಂಗ ಸರ್ವನಾಮಪದವನ್ನು ಉಪಯೋಗಿಸಿ ಏನನ್ನಾದರೂ ನಿವೇದಿಸಲು ಬಯಸಿದ್ದಲ್ಲಿ, ಬಹುಶಃ ಅವನು ಇಬ್ಬರು ಬೋಧಕರು ಒಟ್ಟಾರೆ ಮಾಡಿದ ಕಾರ್ಯದ ಕಡೆಗೆ ಗಮನವನ್ನು ಸೆಳೆಯಲು ಬಯಸಿರಬಹುದು.[3] ಖಚಿತವಾದದ್ದು ಏನಂದರೆ ಕೊರಿಂಥದವರು ಪಟ್ಟಣದಲ್ಲಿ ಪ್ರಸಂಗಿಸಿದ ಒಬ್ಬನನ್ನು ಬೆಲೆಕಟ್ಟುವದರ ಮೂಲಕ, ಹೆಚ್ಚು ಒತ್ತಡವನ್ನು ಪ್ರಸಂಗಿಸಿದವರ ಮೇಲೆ ಹಾಕುತ್ತಿದ್ದರು, ಗ್ರೋಡೌನ್ ಡಿ. ಫೀ ಅವರು ಹೀಗೆ ವೀಕ್ಷಿಸುತ್ತಾರೆ, "ವಿಷಯ ಅವರ ಸಭೆಯ ಸ್ವರೂಪದ ಮತ್ತು ಅದರ ನಾಯಕತ್ವದ ಮಹತ್ವದ ತಪ್ಪಾದ ಮಾರ್ಗದರ್ಶನದ ಗ್ರಹಿಕೆ, ಈ ವಿಷಯದಲ್ಲಿ ವಿಶೇಷವಾಗಿ ಶಿಕ್ಷಕರ ಪಾತ್ರವಾಗಿದೆ."[4]

ಪೌಲನು ಒತ್ತಾಯಪಡಿಸಿದ ಭೋಧಕರುಗಳು, ನಾವು **ಯಾರನ್ನು ನಂಬಿದ್ದೇವೆಯೋ ಅವನ ಮೂಲಕ ಸೇವಕರಿಗಿಂತ** ಸ್ವಲ್ಪ ಕಡಿಮೆ ಅಥವಾ ಸ್ವಲ್ಪ ಹೆಚ್ಚೇನಲ್ಲ, ಕ್ರಿಸ್ತನ ಮತ್ತು ಆತನ ಜನರ ಸೇವೆಯನ್ನು ಸತ್ಯವನ್ನು ಸಾರುವದರ ಮೂಲಕ ಮಾಡುವದು ಒಂದು ಗೌರವವಾಗಿದೆ; ಆದರೆ ಕ್ರೈಸ್ತರು ಬೋಧಕರನ್ನು ಉನ್ನತ ಪಾದಪೀಠದ ಮೇಲೆ ಇರಿಸುವದರಿಂದ ಮತ್ತು ತಮ್ಮ ಸುತ್ತಲೂ ಇರುವ ಸ್ವಾರ್ಥಪರ ವಿಧದಲ್ಲಿ ಇರಿಸುವದರಿಂದ, ಅವರು ಕರ್ತನ ಸೇವಕರಾಗಿರುವ ತಮ್ಮ ಉದ್ದೇಶವನ್ನು ಅವರು ಅಗೌರವಿಸುತ್ತಾರೆ. ಇದು ಶ್ರೇಷ್ಠ ಬೋಧಕರಾದ ಪೌಲ ಮತ್ತು ಅಪೊಲ್ಲೋಸನ ವಿಷಯದಲ್ಲಿ ಸಹ ಸತ್ಯವಾಗಿದೆ. ಇಂದು ಅವರಿಗಿಂತ ಕಡಿಮೆ ಸಾಧನೆ ಮಾಡಿರುವವರ ವಿಷಯದಲ್ಲಿ ಇದು ಎಷ್ಟರ ಮಟ್ಟಿಗೆ ನಿಜವಾಗಿರಬಹುದು!

ದೇವರೊಂದಿಗೆ ಪೌಲನ ಸಂಬಂಧ "ದಾಸ" ನದಾಗಿತ್ತು (δοῦλος, *doulos*); ಆದರೆ ಸಭೆಗಳೊಂದಿಗೆ ಅವನ ಸಂಬಂಧ, ಅವನು ದೇವಸೇವಕ ಅಥವಾ ಸೇವಕ (διάκονος, *diakonos*). ಅವನಾಗಲಿ ಅಥವಾ ಅಪೊಲ್ಲೋಸನಾಗಲಿ ಯಾರ ಮುಂದೆ ಎಲ್ಲರೂ ತಲೆಬಾಗಬೇಕೋ ಅಲ್ಲಿ ತನ್ನನ್ನು ತಾನು ಭೋಧಕನೆಂದು ಹೇಳಿಕೊಳ್ಳಲಿಲ್ಲ, ಇದನ್ನು ಸ್ಪಷ್ಟಪಡಿಸುತ್ತಾನೆ. ದೇವರು **ಪ್ರತಿಯೊಬ್ಬರಿಗೂ** ತಮ್ಮದೇ ಆದ ಮಾರ್ಗದಲ್ಲಿ ಸೇವೆಯನ್ನು ಮಾಡಲು **ಅವಕಾಶವನ್ನು ನೀಡುತ್ತಾನೆ** (ಪೌಲನಿಗೆ ಮತ್ತು ಅಪೊಲ್ಲೋಸನಿಗೆ). ಅವರಿಂದ ಯಾವುದೇ ಪಂಗಡದ ಕುರಿತು ನಿಷ್ಠೆಯನ್ನು ಬಯಸುವದಿಲ್ಲ. ಪೌಲ ಮತ್ತು ಅಪೊಲ್ಲೋಸ ಕ್ರಿಸ್ತನಲ್ಲಿ ಒಂದಾಗಿರುವ ಸಹಭಾಗಿಗಳು, ಆದುದರಿಂದ ಕೊರಿಂಥದ ಕ್ರೈಸ್ತರು ಒಂದಾಗಿರಬೇಕು. ಸೇವೆಯಲ್ಲಿ ಮರ್ಯಾದೆಯಲ್ಲಿ ಅಲ್ಲ, ಇದು ಕ್ರೈಸ್ತ ಪ್ರಭುದ್ಧತೆಯ ಗುರುತಾಗಿದೆ.

**ವಚನ 6.** ಸಭೆಯಲ್ಲಿ ಬೋಧಕರ ಪಾತ್ರವನ್ನು ಸ್ಪಷ್ಟೀಕರಿಸಲು, ಪೌಲನು ವ್ಯವಸಾಯದಿಂದ ತೆಗೆದುಕೊಂಡ ಒಂದು ಉದಾಹರಣೆಯನ್ನು ಮಂಡಿಸುತ್ತಾನೆ. ಕೊರಿಂಥದಲ್ಲಿ ಪ್ರಾರಂಭದಲ್ಲಿ ಕ್ರಿಸ್ತನನ್ನು ಪ್ರಸಂಗಿಸಿದ ಮೊದಲನೆಯ ವ್ಯಕ್ತಿ ಅಪೊಲ್ಲೋಸನು ಅರಳುತ್ತಿರುವ ನಂಬಿಕೆಯನ್ನು ಪೊಷಿಸಿದನು. **ನಾನು ಗಿಡವನ್ನು ನೆಟ್ಟೆನು, ಅಪೊಲ್ಲೋಸನು ನೀರನ್ನು ಉಣಿಸಿದನು**, ಎಂದು ಪೌಲನು ಹೇಳುತ್ತಾನೆ. ಪೌಲ ಮತ್ತು ಅಪೊಲ್ಲೋಸರ ಕಾರ್ಯಗಳು ಒಂದಕ್ಕೊಂದು ಪೂರಕವಾಗಿದ್ದವು. ಪೌಲನು ಅಪೊಲ್ಲೋಸನಿಗೆ ಎಲ್ಲಾ

ಮಾನವನ್ನು ನೀಡುತ್ತಾನೆ. ಅವನ ಮಾತುಗಳಲ್ಲಿ ಇಬ್ಬರೂ ಬೋಧಕರನ್ನು ಅಲ್ಲಗಳೆಯುವಂತ ಒಂದು ಚಿಕ್ಕ ಕುರುಹನ್ನು ಕಾಣುವದಿಲ್ಲ. ಆತ್ಮಗಳು ರಕ್ಷಣೆಹೊಂದುವಾಗ, **ದೇವರು ಬೆಳವಣಿಗೆಗೆ ಕಾರ್ಯಮಾಡುತ್ತಿದ್ದನು.** ಕೊರಿಂಥದವರು ಇಬ್ಬರೂ ದೇವರ ಸೇವಕರ ಸುತ್ತ ಪಂಗಡಗಳನ್ನು ರಚಿಸುವದು ಮೂರ್ಖತನವಾಗಿದೆ. ಪೌಲ ಮತ್ತು ಅಪೊಲ್ಲೋಸ ಹಿನ್ನೆಲೆಯಲ್ಲಿ ಬಾಡಿಹೋಗಲು ಕೂತೂಹಲವುಳ್ಳವರಾಗಿದ್ದರು, ಕ್ರಿಸ್ತನನ್ನು ಮಹಿಮೆ ಪಡಿಸಲು ಎಲ್ಲಾ ಮನುಷ್ಯ ಅಳತೆಗಳನ್ನು ಏನೂ ಅಲ್ಲ ಎಂದು ಪರಿಗಣಿಸುತ್ತಿದ್ದರು (ಫಿಲಿಪ್ಪಿ 3:8, 9).

**ವಚನ 7.** ಪೌಲ ಮತ್ತು ಅಪೊಲ್ಲೋಸ ಭೂಮಿಯ ಮೇಲೆ ಆಳುಗಳು, ಕೊರಿಂಥದಲ್ಲಿರುವ ಸಭೆ ತಾನೆ ಹೊಲವಾಗಿದೆ. ಎಲ್ಲಾ ಬೋಧಕರು ಮಾಡಬೇಕಾದದ್ದು ಏನಂದರೆ ಭೂಮಿಯನ್ನು ಸಿದ್ಧಪಡಿಸಬೇಕು, ಬೀಜವನ್ನು ಬಿತ್ತಬೇಕು, ನೀರು ಉಣಿಸಬೇಕು ಮತ್ತು ಗೊಬ್ಬರವನ್ನು ಹಾಕಬೇಕು. ಈ ಎಲ್ಲಾ ಪ್ರಯತ್ನಗಳು ಬೀಜವು ಮೊಳಕೆ ಒಡೆಯುವದರ ಮತ್ತು ಭೂಮಿಯ ಮೇಲೆ ಹಸಿರು ಚಿಗುರು ಹೊರಗೆ ಕಾಣಿಸಿಕೊಳ್ಳುವದರ ಮುಂದೆ ನಿರರ್ಥಕವಾಗಿವೆ. ಆಳುಗಳು ನೆರಳಿನಲ್ಲಿ ಕಾಲಿಟ್ಟರು; **ಬೆಳವಣಿಗೆಗೆ ಕಾರಣನು ದೇವರು.** ಸಭೆಯು ಕ್ರೂಜೆಯಿಂದ ರೂಪಿಸಲ್ಪಟ್ಟ ದೇಹವಾಗಿದೆ (2:2) ಯಾಕಂದರೆ ಅದರ ಕೃಪೆಯ ಸಂದೇಶ ಪುರುಷ ಮತ್ತು ಸ್ತ್ರೀಯರನ್ನು ರಕ್ಷಣೆಯೆಡೆಗೆ ನಡೆಸುತ್ತದೆ.

**ವಚನ 8.** ಒಂದು ಅರ್ಥದಲ್ಲಿ, ಮನಸ್ಸು ಮತ್ತು ಹೃದಯ, ಮತ್ತು ಪೌಲ, ಅಪೊಲ್ಲೋಸರ ಪ್ರಯತ್ನ ಮತ್ತು ವಾಕ್ಯವನ್ನು ಬೋಧಿಸುವ ಪ್ರತಿಯೊಬ್ಬ ಬೋಧಕ ಒಂದು ಕಡೆ. ಈ ಅರ್ಥವನ್ನು NRSV ಉತ್ತಮವಾಗಿ ಸೆರೆಹಿಡಿಯುತ್ತದೆ. "ನೆಡುವವನಾಗಲಿ ಮತ್ತು ನೀರನ್ನು ಉಣಿಸುವವನಾಗಲಿ ಒಂದೇ ಉದ್ದೇಶವಿರುತ್ತದೆ." ಅದೇ ಸಮಯದಲ್ಲಿ ಪ್ರತಿಯೊಬ್ಬ ಬೋಧಕರು ಒಬ್ಬ ವ್ಯಕ್ತಿಯಾಗಿದ್ದಾರೆ. ಅವರ ಸಾಮರ್ಥ್ಯಗಳು ತಮ್ಮಲ್ಲಿಯೇ ವಿಶಿಷ್ಟವಾಗಿರುತ್ತವೆ. ಪ್ರತಿಯೊಬ್ಬರು ತಮ್ಮದೇ ಆದ ವಿಧದಲ್ಲಿ ಸಭೆಯ ಬೆಳವಣಿಗೆಗೆ ಕೊಡುಗೆಯನ್ನು ನೀಡುತ್ತಾರೆ. ಕೊನೆಯಲ್ಲಿ, ಎಲ್ಲಾ ಮನುಷ್ಯ ಪ್ರಯತ್ನಗಳನ್ನು ದೇವರು ವರ್ಗೀಕರಿಸುತ್ತಾನೆ. **ತನ್ನ ಶ್ರಮೆಗೆ ಅನುಸಾರವಾಗಿ ಪ್ರತಿಯೊಬ್ಬನು ಬಹುಮಾನವನ್ನು ಹೊಂದುತ್ತಾನೆ.** ಕೊರಿಂಥದಲ್ಲಿರುವ ಕ್ರೈಸ್ತರು ಪೌಲ ಮತ್ತು ಅಪೊಲ್ಲೋಸನ, ಮತ್ತು ತಮಗೆ ಸತ್ಯವನ್ನು ಬೋಧಿಸಿದ ಇತರರ ಪ್ರಯತ್ನಗಳನ್ನು ಉತ್ತಮವಾಗಿ ಪ್ರಶಂಸಿಸಿದರು; ಆದರೆ ಹೋಲಿಕೆಯನ್ನು ಮಾಡಲು ಸಾಧ್ಯವಿರಲಿಲ್ಲ. ವಯಕ್ತಿಕ ಆದ್ಯತೆಗಳಿಗಾಗಿ ಕ್ರಿಸ್ತನ ದೇಹದ ಏಕತೆಯನ್ನು ವಿಭಾಗಿಸುವದು ಕ್ಷಮಿಸಲು ಅಸಾಧ್ಯವಾದದ್ದಾಗಿದೆ.

ಪೌಲನು, ಇತರರ ಸೂಚನೆಯಂತೆ, "ಪ್ರತಿಯೊಬ್ಬನು ತನ್ನ ಸ್ವಂತ ಬಹುಮಾನವನ್ನು ಹೊಂದುವನು" ಎಂದು ಅಪೊಲ್ಲೋಸನ ಕುರಿತು ತನ್ನಷ್ಟಕ್ಕೆ ಹೀಗೆ ಹೇಳುವದು ಅನಿರೀಕ್ಷಿತವಾಗಿದೆ (3:14 ನೋಡಿರಿ). ಇಲ್ಲಿ ಆತನು "ಕೂಲಿ" ಎನ್ನುವದನ್ನು ಗ್ರೀಕನಲ್ಲಿ ಸಂಬಳಕ್ಕಾಗಿ ನೇಮಿಸಿದ ಆಳಿಗೆ (μισθός, *misthos*) ಉಪಯೋಗಿಸುವ ಪದವನ್ನು ಉಪಯೋಗಿಸುತ್ತಾನೆ. ರೋಮ 4:4ರಲ್ಲಿ ಪದವನ್ನು "ಕೂಲಿ" [NASB] ಅಥವಾ "ಸಂಬಳ" [NIV] ಎಂದು ಅನುವಾದಿಸಲಾಗಿದೆ). ಕೂಲಿಯು ಸಲ್ಲಿಸಿದ ಸೇವೆಗೆ ದೊರೆಯುವ ಸಂಭಾವನೆಯಾಗಿದೆ, ಮತ್ತು ಇದನ್ನೇ ಅಪೊಸ್ತಲನು ಪಾಪಿಗಳನ್ನು ರಕ್ಷಿಸುವಾಗ ಸಂಬಳವನ್ನು ಕೊಡುಗೆಯಾಗಿ ನೀಡುವದಿಲ್ಲ ಎಂಬುದನ್ನು ನಿರ್ವಹಿಸುತ್ತಾನೆ. ಅವನು

ತನ್ನನ್ನು ತಾನು ಸುವಾರ್ತೆಯನ್ನು ಸಾರದೇ ಇರಲಾರದ, ಅಯೋಗ್ಯ ಸೇವಕನೆಂದು ಗುರುತಿಸಿಕೊಳ್ಳುತ್ತಾನೆ (1 ಕೊರಿಂಥ 4:1; 9:16; 1 ತಿಮೋಥಿ 1:15; ನೋಡಿರಿ ಲೂಕ 17:10). ವಿಶ್ವಾಸಿಯ ನಂಬಿಕೆಯು "ಅವನ ಲೆಕ್ಕಕ್ಕೆ ನೀತಿವಂತಿಕೆ ಎಂದು ಎಣಿಸಲ್ಪಟ್ಟಿತು" (ರೋಮಾ 4:3; NIV). ಅದೇ ಸಮಯದಲ್ಲಿ ಮಾನವನ ಅರ್ಹತೆಯ ಅನುಪಸ್ಥಿತಿಯಲ್ಲಿ ದೇವರ ಕೃಪೆಯ ಮಾದರಿ ಪೌಲನ ವಿಶ್ವಸನೀಯ ಸಂದೇಶವಾಗಿದೆ, ಅಪೊಸ್ತಲನು ಮಾನವನ ಜವಾಬ್ದಾರಿಗಳಿಗೆ ಒತ್ತು ನೀಡುವದಕ್ಕೆ ನಾಚಿಕೆ ಪಡುವದಿಲ್ಲ. ಪೌಲನ ಮನಸ್ಸಿನಲ್ಲಿರುವ ಕೂಲಿ ದಿನದಲ್ಲಿ ಒಂದು ತಾಸು ಮಾತ್ರ ಕೆಲಸ ಮಾಡಿದ ಆಳಿಗೆ ಯಜಮಾನನಿಂದ ದೊರೆತ ಕೂಲಿಯ ಕ್ರಮವಾಗಿದೆ (ಮತ್ತಾಯ 20:8). ನ್ಯಾಯತೀರ್ಪು ಅದು ನಮ್ಮ ಅರ್ಹತೆಗೆ ದೊರೆಯುವಂತದಲ್ಲ, ಆದರೆ ಅದು ನಮ್ಮ ನಡತೆಯ ಮೂಲಕ ವ್ಯಕ್ತಪಡಿಸಿದ ನಂಬಿಕೆ ಸಿಗುವಂತ್ತಾಗಿದೆ (ರೋಮಾ 2:13).

**ವಚನ 9.** "ದೇವರ" ವಂಶಾವಳಿ ಮೊದಲು ಗ್ರೀಕ್ ವಾಕ್ಯದಲ್ಲಿ 3:9ಅ ದಲ್ಲಿ ಬರುತ್ತದೆ. ವಾಸ್ತವವಾಗಿ, ಅದು "ನಾವು ದೇವರ ಜೊತೆ ಕೆಲಸದವರು." ಒಂದು ನಿಖರವಾದ ಒತ್ತ್ತನ್ನು ದೇವರಿಗೆ ನೀಡಲಾಗಿದೆ. ಪೌಲನು ಕ್ರೈಸ್ತರ ಎಲ್ಲಾ ಪ್ರಯತ್ನಗಳಲ್ಲಿ ದೇವರು ಕೇಂದ್ರವಾಗಿದ್ದಾನೆ ಎಂದು ಸ್ಪಷ್ಟವಾಗಿ ಹೇಳುತ್ತಾನೆ. ಪೌಲ ಮತ್ತು ಅಪೊಲ್ಲೋಸ, ಕನಿಷ್ಠ ಪಕ್ಷ ಪ್ರಸ್ತುತ ಹೋಲಿಕೆಯ ಉಲ್ಲೇಖದಲ್ಲಿ, **ದೇವರ ಜೊತೆ ಕೆಲಸದವರು**, ಆ ಸಾಮಥ್ರ್ಯದಲ್ಲಿ ಸಹ ಅವರು ಕೇವಲ ಆಳುಗಳು. ಕ್ರಿಸ್ತನ ಸೇವಕ ತನ್ನ ಪ್ರಾಮುಖ್ಯತೆಯನ್ನು ದೇವರೊಂದಿಗೆ ತನ್ನ ಸಂಬಂಧದ ಮೂಲಕ ಪಡೆದುಕೊಳ್ಳುತ್ತಾನೆ. ಅಲ್ಲಿ ಸ್ವ-ಹೆಚ್ಚಳಕ್ಕೆ ಅಥವಾ ತನಗಾಗಿ ಮಹಿಮೆಯನ್ನು-ಹುಡುಕುವವರಿಗೆ ಸ್ಥಳವಿಲ್ಲ. ದೇಹವು ಮೂಲತಃ ಒಂದೇ ಆಗಿದೆ. ಕೊರಿಂಥದವರು **ದೇವರ ಕಾರ್ಯರಂಗವಾಗಿದ್ದಾರೆ, ದೇವರ ಕಟ್ಟಡವಾಗಿದ್ದಾರೆ**. ಈಗಾಗಲೇ, ಅಪೊಸ್ತಲನು ಒಕ್ಕಲುತನದ ಸಾಮ್ಯದ ರೂಪಕಾಲಂಕಾರ ದಿಂದ ಕಟ್ಟುವ ರೂಪಕಾಲಂಕಾರಕ್ಕೆ ನಿರೀಕ್ಷಿಸುವ ಸಂಯುಕ್ತ ಪ್ರಯತ್ನವನ್ನು ಮಾಡುತ್ತಿದ್ದಾನೆ (3:10-17). ಓದುಗರು ಪೌಲನ ಅಲಂಕಾರಿಕ ಭಾಷೆ - "ಜೊತೆ ಕೆಲಸಗಾರು," "ಹೊಲ," "ಕಟ್ಟುವದು" - ವಿವರಗಳಿಗೆ ಅತೀಯಾದ ಒತ್ತು ನೀಡಬಾರದು. ಅವನ ವಿಷಯವು ನಾವು ಮಾಡುವ ಎಲ್ಲಾ ಕಾರ್ಯಗಳಲ್ಲಿ ದೇವರು ಕೇಂದ್ರವಾಗಿರಬೇಕು ಎಂಬ ವಿಷಯದಲ್ಲಿ ಹೇಳಿದಂತೆ, ದೇವರ ಸೇವಕರ ನಿರ್ಧಿಷ್ಟವಾದ ಕಾರ್ಯಗಳ ಕುರಿತು ಹೆಚ್ಚು ಕಾಳಜಿ ವಹಿಸುವದಿಲ್ಲ. ಅವನು ದೇಹದ ಐಕ್ಯತೆಯ ಮಹತ್ವದ ಕುರಿತು ಏನು ಹೇಳಿದ್ದಾನೋ ಅದು ನಿಜವಾಗಿದೆ.

## ದೇವರ ಕಟ್ಟಡ; ದೇವರ ಆಲಯ (3:10-17)

ಅಪೊಲ್ಲೋಸನು ಮತ್ತು ತಾನು ಮಾಡಿದ ಕಾರ್ಯವನ್ನು ಕೊರಿಂಥದವರ ಮುಂದೆ ಇಟ್ಟುಕೊಂಡು, ಅಪೊಸ್ತಲನು ಕೌಶಲ್ಯಾತ್ಮಕವಾಗಿ ಕ್ರೈಸ್ತರು ಅನುಭವಿಸಿದ ಕೃಪೆ ಮತ್ತು ಅದೇ ಸಮಯದಲ್ಲಿ ಸುತ್ತಿಕೊಂಡು ಪ್ರಭುದ್ಧತೆಯನ್ನು ಬೆಳೆಸಲು ಮತ್ತು ದೇಹದ ಐಕ್ಯತೆಯ ಕುರಿತು ಪ್ರತಿಯೊಬ್ಬ ವಿಶ್ವಾಸಿಯ ಜವಾಬ್ದಾರಿ ಇವುಗಳೆಡೆಗೆ ತಿರುಗಿ ಬರುತ್ತಾನೆ. ಪೌಲನು ತನ್ನ ಪಾಠದ ಅಳವಡಿಸುವಿಕೆಯನ್ನು ಬೋಧಕರಿಂದ ಸಂಪೂರ್ಣ ಸಭೆಯೆಡೆಗೆ ಬದಲಾಯಿಸುತ್ತಾನೆ. ಕೊರಿಂಥದಲ್ಲಿರುವ ಪ್ರತಿಯೊಬ್ಬ ಕ್ರೈಸ್ತನು ಅದರ ರಚನೆಯಲ್ಲಿ ದೃಢತೆಯನ್ನು, ಕಟ್ಟುವ ಕೆಲಸದಲ್ಲಿ ತನ್ನ ಜವಾಬ್ದಾರಿಯನ್ನು ಮತ್ತು ತನ್ನ ಕೊಡುಗೆಯನ್ನು

ಪರೀಕ್ಷಿಸಿಕೊಳ್ಳಬೇಕು. ಕೊನೆಯಲ್ಲಿ, ಪೌಲನು ಸಭೆಯನ್ನು ಕಟ್ಟಡಕ್ಕೆ ಹೋಲಿಸುವದು ಅಸಮಂಜಸವಾಗಿದೆ. ಕ್ರಿಸ್ತನ ಸಭೆ, ನಿಜವಾಗಿಯೂ, ದೇವರ ಆಲಯವಾಗಿದೆ. ದೇವರು ಅದರ ಆವರಣದಲ್ಲಿ ವಾಸಿಸುತ್ತಾನೆ.

## "ನೀವು ಹೇಗೆ ಕಟ್ಟುತ್ತೀರಿ ಎಂಬ ವಿಷಯದಲ್ಲಿ ಎಚ್ಚರಿಕೆಯಾಗಿರ್ರಿ" (3:10-15)

**[10]ದೇವರು ನನಗೆ ಕೃಪೆಯಿಂದ ಒಪ್ಪಿಸಿದ ಕೆಲಸವನ್ನು ನಡಿಸಿ ನಾನು
ಪ್ರವೀಣಶಿಲ್ಪಿಯಂತೆ ಅಸ್ತಿವಾರ ಹಾಕಿದೆನು. ಮತ್ತೊಬ್ಬನು ಅದರ ಮೇಲೆ ಕಟ್ಟುತ್ತಾನೆ.
ಪ್ರತಿಯೊಬ್ಬನು ತಾನು ಅದರ ಮೇಲೆ ಎಂಥದನ್ನು ಕಟ್ಟುತ್ತಾನೋ ಎಚ್ಚರಿಕೆಯಾರಿಗಬೇಕು.
[11]ಹಾಕಿರುವ ಅಸ್ತಿವಾರವು ಯೇಸು ಕ್ರಿಸ್ತನೇ; ಆ ಅಸ್ತಿವಾರವನ್ನಲ್ಲದೆ ಮತೊಂದು
ಅಸ್ತಿವಾರವನ್ನು ಯಾರೂ ಹಾಕಲಾರರಷ್ಟೆ, [12]ಆ ಅಸ್ತಿವಾರದ ಮೇಲೆ ಚಿನ್ನ ಬೆಳ್ಳಿ ರತ್ನ ಕಟ್ಟಿಗೆ
ಹುಲ್ಲು ಆಪು ಮುಂತಾದವುಗಳಲ್ಲಿ ಯಾವದರಿಂದ ಕಟ್ಟಿದರೂ [13]ಅವನವನ ಕೆಲಸವು
ವ್ಯಕ್ತವಾಗುವದು. ಕ್ರಿಸ್ತನು ಬರುವ ದಿನವೂ ಬೆಂಕಿಯೊಡನೆ ಉದಯವಾಗಿ ಆ ಕೆಲಸವನ್ನು
ಸ್ಪಷ್ಟವಾಗಿ ತೋರಿಸುವದು; ಅವನವನ ಕೆಲಸವೆಂಥದ್ದೋ ಆ ಬೆಂಕಿ ಶೋಧಿಸುವದು.
[14]ಒಬ್ಬನು ಆ ಅಸ್ತಿವಾರದ ಮೇಲೆ ಕಟ್ಟಿದ್ದು ಉಳಿದರೆ ಅವನಿಗೆ ಸಂಬಳಬರುವದು. [15]ಒಬ್ಬನು
ಕಟ್ಟಿದ್ದು ಸುಟ್ಟುಹೋದರೆ ಅವನಿಗೆ ಸಂಬಳವು ನಷ್ಟವಾಗುವದು; ತಾನಾದರೋ ರಕ್ಷಣೆ
ಹೊಂದುವನು. ಆದರೆ ಬೆಂಕಿಯೊಳಗಿಂದ ತಪ್ಪಿಸಿಕೊಂಡವನ ಹಾಗಿರುವನು.**

**ವಚನ 10.** ಪೌಲನು ಮತ್ತು ಅಪೊಲ್ಲೋಸನು ಕ್ರಿಸ್ತನ ಮತ್ತು ಆತನ ಸಭೆಯ ಸೇವೆಯನ್ನು ಮಾಡಿದ್ದಾರೆಂದು ತಿಳಿದುಕೊಳ್ಳಲು ಅಪೊಸ್ತಲನು ಒಕ್ಕಲುತನದ ಮತ್ತು ಮನೆಕಟ್ಟುವ ರೂಪಕಾಲಂಕಾರವನ್ನು ಉಪಯೋಗಿಸುತ್ತಾನೆ. ಅವಗಳಲ್ಲಿ ಯಾವುದೂ ಸ್ವತಂತ್ರವಾಗಿ ನಿಲ್ಲುವದಿಲ್ಲ. ಕ್ರೈಸ್ತರು ಪಂಗಡದ ನಿಷ್ಠೆಗಾಗಿ ಅವರಲ್ಲಿ ಒಬ್ಬರನ್ನು ಆಯ್ದುಕೊಳ್ಳುವದು ಕರ್ತನಿಗೆ ಅ ಗೌರವ ತೋರಿಸಿದಂತೆ. ಇಬ್ಬರು ಸೇವಕರು ಕಾರ್ಯ ಮಾಡಿದ ಕಾರ್ಯಕ್ಷೇತ್ರ ಸಭೆಯಾಗಿದೆ.

ಸಭೆಯು ದೇವರ ಕಟ್ಟಡ, ಎರಡನ್ನೂ ಬೇರೆಬೇರೆಯಾಗಿ ಪರಿಗಣಿಸಿರಿ. ಕಟ್ಟಡದ ರೂಪಕಾಲಂಕಾರವನ್ನು ಉಪಯೋಗಿಸಿ ಪೌಲನು ಈ ರೂಪಕಾಲಂಕಾರದಲ್ಲಿ ಕಂಡುಬರೆದೇ ಇರುವ ಕೆಲವು ಕಾರ್ಯಗಳನ್ನು ಉಪಯೋಗಿಸಿ, ಅಪೊಲ್ಲೋಸ ಮತ್ತು ತನ್ನಿಂದ ಆದ ಕಾರ್ಯಗಳ ಮೇಲೆ ಗಮನವನ್ನು ಕೇಂದ್ರಿಕರಿಸುತ್ತಾನೆ.

ದೇವರ ಕೃಪೆಯಿಂದ ಪೌಲನು ಕೊರಿಂಥದಲ್ಲಿರುವ ಸಭೆಗೆ **ಅಸ್ತಿವಾರವನ್ನು ಹಾಕಿದನು**. ಅಪೊಸ್ತಲನು ತನ್ನನ್ನು ತಾನು ἀρχιτέκτων (*architektōn*, "ಪ್ರವೀಣ ಶಿಲ್ಪಿ") ಎಂಬ ಪದನಾಮವದಿಂದ ಗುರುತಿಸಿಕೊಳ್ಳುತ್ತಾನೆ.[5] ರೂಪಕಾಲಂಕಾರದಲ್ಲಿ ಕಟ್ಟಣವನ್ನು ಪರಿಗಣಿಸಿರಿ, ಪೌಲನು ಕೊರಿಂಥದಲ್ಲಿರುವ ಸಭೆಗೆ ಅಸ್ತಿವಾರವನ್ನು ಹಾಕಿದನು; ಅಪೊಲ್ಲೋಸನು ಅಸ್ತಿವಾರದ ಮೇಲೆ ಕಟ್ಟಿದನು. ಆತನು ಉತ್ತಮವಾಗಿ ಕಟ್ಟಿದನು, ಆದರೆ ಇತರರು ಕೊಡುಗೆಯನ್ನು ನೀಡಲು ಅಪೇಕ್ಷಿಸಿದರು. ಕೆಲವು ಬುದ್ಧಿವಂತಿಕೆಯಿಂದ ಕಟ್ಟುತ್ತಾರೆ; ಇತರರು ಅಲಕ್ಷತನದಿಂದ ಕಟ್ಟುತ್ತಾರೆ ಅಥವಾ ಕಳಪೆ ವಸ್ತುಗಳನ್ನು ಉಪಯೋಗಿಸುತ್ತಾರೆ.

ಈ ಕ್ಷಣದಲ್ಲಿ, ಅಪೊಸ್ತಲನು ತಾನು ಮತ್ತು ಅಪೊಲ್ಲೋಸನಿಂದ ಆಚೆಗೆ ಹೋಗಿ (16:12). ಪೌಲನು ಕೊರಿಂಥದಲ್ಲಿರುವ ಹೆಸರಿಲ್ಲದ ಒಬ್ಬ ಬೋಧಕನನ್ನು, ಬಹಳ ಮಟ್ಟಿಗೆ ಯಾರೋ ಒಬ್ಬರು ಪಂಗಡಗಳನ್ನು ಪ್ರೋತ್ಸಾಹಿಸಲು ಅಪೊಲ್ಲೋಸನ ಹೆಸರನ್ನು ಇತರರು ಹೇಗೆ ಕಟ್ಟುತ್ತಿರಬಹುದು ಎಂಬುದನ್ನು ಪರಿಗಣಿಸಿ. ಏಕವಚನದ ನಾಮವಿಶೇಷಣವನ್ನು ಮತ್ತು ವರ್ತಮಾನ ಕಾಲವನ್ನು ಉಪಯೋಗಿಸಿ ಅವನು ತಾನು ಹಾಕಿದ ಅಸ್ತಿವಾರದ ಕುರಿತಾಗಿ ಮಾತನಾಡುತ್ತಾನೆ. ಇನ್ನೊಂದನ್ನು ಅದರ ಮೇಲೆ ಕಟ್ಟುವದು. ಪೌಲನ ಮನಸ್ಸಿನಲ್ಲಿರುವ ಇನ್ನೊಬ್ಬ ಶಿಲ್ಪಿ ಸಹಜವಾಗಿ ಅಪೊಲ್ಲೋಸನಲ್ಲ. ಅಪೊಲ್ಲೋಸನು ಇನ್ನು ಮುಂದೆ ಪಟ್ಟಣದಲ್ಲಿ ಇರಲಿಲ್ಲ ಕೊರಿಂಥ ಉಪಯೋಗಿಸಿಕೊಂಡವನಿರಬಹುದು. ಆ ಮನುಷ್ಯನ ಕುರಿತು, ಪೌಲನು **ಪ್ರತಿಯೊಬ್ಬನು ತಾನು ಹೇಗೆ ಕಟ್ಟುತ್ತಾನೆ ಎಂಬ ವಿಷಯದಲ್ಲಿ ಎಚ್ಚರವಾಗಿರಬೇಕು** ಎಂದು ಎಚ್ಚರಿಸುತ್ತಾನೆ. ಒಬ್ಬನು ಬೋಧಕನೆಂದು ಉಹಿಸಿಕೊಳ್ಳುವಾಗ ಅವನು ತನಗೆ ಮತ್ತು ಸಭೆಗೆ ದೊಡ್ಡ ಅಪಾಯವನ್ನು ತಂದುಕೊಳ್ಳುವವನಾಗಿದ್ದಾನೆ. ಯಾಕೋಬನಂತೆ, ಪೌಲನು ಯಾರಾದರೂ ಕ್ರೈಸ್ತ ಬೋಧಕರಾಗಲು ಬಯಸುವವರಿಗೆ ತಾವು ತೆಗೆದುಕೊಳ್ಳುತ್ತಿರುವ ಜವಾಬ್ದಾರಿಯ ಕುರಿತು ಎಚ್ಚರವಾಗಿರಲು ಹೇಳುತ್ತಾನೆ (ಯಾಕೋಬ 3:1 ನೋಡಿರಿ).

**ವಚನ 11.** ಪೌಲನು ಕೊರಿಂಥದಲ್ಲಿ ಹಾಕಿರುವ ಅಸ್ತಿವಾರವು "ಕ್ರೂಜಿತನಾದ ಯೇಸು ಕ್ರಿಸ್ತನು" (2:2). ತೋರಿಕೆಯ ರಚನೆಯನ್ನು ಕಟ್ಟುವದಕ್ಕೆ ಯಾರಾದರು ಪ್ರಯತ್ನ ಮಾಡಿದ್ದಲ್ಲಿ ಅದು ಬೋಧಕರ ಕುರಿತು ಇರುವ ನಿಷ್ಠೆಯ ಪರಿಣಾಮವಾಗಿ ಪೌಲನು ಹಾಕಿದ ಅಸ್ತಿವಾರದ ಹೊರತಾಗಿ ಯೌವುದಾದರೂ ಅಸ್ತಿ ವಾರವನ್ನು ಹಾಕಲು ಕರೆನೀಡುತ್ತದೆ ಅದು ಪಂಗಡಗಳಿಗೆ ಕಾರಣವಾಗುತ್ತದೆ. ಕೊರಿಂಥದವರು ಅನುಭವಿಸುತ್ತಿರುವ ಪಂಗಡಗಳು ಮೂಲಭೂತ ರಚನೆಯನ್ನು ತಿರಸ್ಕರಿಸಿದಂತಾಗುತ್ತದೆ. ಜೀವ, ರಕ್ಷಣೆ ಮತ್ತು ನಿರೀಕ್ಷೆಯನ್ನು ಹೊಂದಿಕೊಳ್ಳಬೇಕೆಂದು ಬಯಸುವ **ಯಾವ ಮನುಷ್ಯನೂ** ಹಾಕಿರುವ **ಅಸ್ತಿವಾರವನ್ನು ಬಿಟ್ಟು ಬೇರೆ ಅಸ್ತಿವಾರವನ್ನು ಹಾಕಲಾರನು**. ಮಾನವ ಜ್ಞಾನವನ್ನು ಅವಲಂಬಿಸುವದಾದರೆ ಕ್ರಿಸ್ತನ ದೇಹವನ್ನು ವಿಭಾಗಿಸುವದು ಮತ್ತು ಪೌಲನು ಹಾಕಿದ ಅಸ್ತಿವಾರವನ್ನು ಅಲ್ಲಗಳೆಯುವದಾಗಿದೆ; ಇದು, ತಾತ್ಪರ್ಯದಲ್ಲಿ ಕ್ರಿಸ್ತನನ್ನು ತಿರಸ್ಕರಿಸುವದಾಗಿದೆ. ಸ್ಪರ್ಧಾತ್ಮಕ ಅಸ್ತಿವಾರಗಳು ಕ್ರಿಸ್ತನ ಸಭೆಯಾಗಲು ಬಯಸುವವರ ಪ್ರಶ್ನೆಗಳಿಗೆ ಬಾಹಿರವಾಗಿವೆ.

**ವಚನ 12.** ಪೌಲನು ಕೊರಿಂಥದಲ್ಲಿರುವ ಕ್ರಿಸ್ತನಲ್ಲಿ ಅಸ್ತಿವಾರವನ್ನು ಹಾಕಿದನು; ಅದು, ಅವನು ಅವರಿಗೆ ಕ್ರೈಸ್ತ ಸಿದ್ಧಾಂತಗಳನ್ನು ಬೋಧಿಸಿದನು ಎಂದರ್ಥ. ಅವರು ದೇವರ ಮೆಸ್ಸಿಯನ ವಾಗ್ದಾನವನ್ನು, ಅವನು ಕಷ್ಟಾನುಭವವನ್ನು ಅನುಭವಿಸಬೇಕು ಎಂಬುದನ್ನು ಕಲಿತುಕೊಂಡರು ಮತ್ತು ಅವರಿಗೆ ಆ ವಾಗ್ದಾನವನ್ನು ನೇರವೇರಿಸುವಾತನು ಎಂಬುದನ್ನು ಸಹ ಕಲಿತುಕೊಂಡರು (ಲೂಕ 24:46, 47; ಅ.ಕೃ. 17:3). ಈ ಅಸ್ತಿವಾರಗಳಿಂದ ಆಚೆಗೆ, ಪೌಲನು ಕ್ರೈಸ್ತರನ್ನು ಬೆಳೆಯಲು ಒತ್ತಾಯಪಡಿಸಿದನು. ಅವನು ನಂಬಿಕೆಯಲ್ಲಿ ಮತ್ತು ನಂಬಿಗಸ್ತಿಕೆಯಲ್ಲಿ ಬೆಳೆಯುವದನ್ನು ಗಟ್ಟಿಯಾದ ಆಹಾರದ ಅವಶ್ಯಕತೆಯಿರುವ ಮಕ್ಕಳ ಸಾಮ್ಯವನ್ನು ಉಪಯೋಗಿಸಿ ಮಾತನಾಡಿದನು (1 ಕೊರಿಂಥ 3:2), ಆಳವಾಗಿ ಬೇರೂರಿದ ಗಿಡಗಳಿಗೆ ನೀರಿನ ಅವಶ್ಯಕತೆಯಿರುವ ಹಾಗೆ ಮತ್ತು ಬಲವಾದ ಅಸ್ತಿವಾರದ ಅವಶ್ಯಕತೆ ಇರುವ ಕಟ್ಟಡದ ವಿಷಯವಾಗಿ ಮಾತನಾಡಿದನು. ಪೌಲನು ವಿಶ್ವಾಸದಿಂದ

ಕೊರಿಂಥದಲ್ಲಿರುವ ಸಭೆಯ ಅಸ್ತಿವಾರವು ಸರಿಯಾಗಿ ಹಾಕಲ್ಪಟ್ಟಿದೆ ಆದರೆ ಅದರ ಮೇಲೆ ಕಟ್ಟುವ ಪ್ರಕ್ರಿಯೆಯು ಸರಿಯಾಗಿ ನಡೆಯುತ್ತಿದೆ ಎಂಬುದರ ಕುರಿತು ಆತನು ಅಷ್ಟು ವಿಶ್ವಾಸವನ್ನು ಹೊಂದಿರುವದಿಲ್ಲ. ಕೊರಿಂಥದಲ್ಲಿ ಬೋಧನೆ ಮತ್ತು ಆಚರಣೆ ಎರಡು ಬೇರೆಬೇರೆ ಕಟ್ಟಡದ ಸಾಧನಗಳ ಕ್ರಮಗಳಲ್ಲಿ ನಡೆಯುತಿತ್ತು. ಕೆಲವರು ಸ್ವಸ್ಥ ಮತ್ತು ದೇವರ ಮಹಿಮೆಗಾಗಿ ಮಾಡುವವರಾಗಿದ್ದರು, ಇತರರು ಯಾವುದೇ ಒಳ್ಳೇತನವನ್ನು ವಾಗ್ದಾನ ಮಾಡಲಿಲ್ಲ.

ಅಪೊಸ್ತಲನ ಕಟ್ಟಡದ ಸಾಧನಗಳ ಕುರಿತಾದ ಸಾಮ್ಯವು ಬಹಳ ಕಾಲದವರೆಗೆ ಉಳಿಯಲಿಲ್ಲ. ಸ್ವಸ್ಥ ರಚನೆಯನ್ನು ಕಟ್ಟುವದಕ್ಕೆ ಬಂಗಾರ ಮತ್ತು ಬೆಳ್ಳಿ ಕಲ್ಲು ಮತ್ತು ಕಟ್ಟಿಗೆಯಂತೆ ಅಷ್ಟೊಂದು ಪ್ರಾಯೋಗಿಕವಲ್ಲ. ಪೌಲನ ಸಾಮ್ಯವು ಅದರ ರಚನೆಗಿಂತ ಹೆಚ್ಚಾಗಿ ಅದರ ಸೌಂದರ್ಯ ಮತ್ತು ಅದನ್ನು ಕಟ್ಟುವ ಕೃಪೆಯನ್ನು ನಿವೇದಿಸುತ್ತದೆ. ಒಬ್ಬ ಶಿಲ್ಪಿ ಕಟ್ಟಡವನ್ನು, ಕಟ್ಟಡದ ರಚನೆಯ ಕುರಿತು ತೃಪ್ತಿಹೊಂದದೆ ಅದನ್ನು ಬಂಗಾರ, ಬೆಳ್ಳಿ ಮತ್ತು ಬೆಲೆಬಾಳುವ ಹರಳುಗಳ ಮೂಲಕ ಅಲಂಕರಿಸಲು ಬಯಸುವದಿಲ್ಲ. ಪೌಲನು ಯಾವುದು ಕ್ರಿಸ್ತನೆಂಬ ಅಸ್ತಿವಾರದ ಮೇಲೆ ಕಟ್ಟಲ್ಪಡುತ್ತದೋ ಅದು ಮನುಷ್ಯನು ನೀಡುವ ಅನೇಕ ಬೆಲೆಬಾಳುವ ವಸ್ತುಗಳಿಗಿಂತ ಬೆಲಬಾಳುವಂಥದ್ದಾಗಿದೆ. ದೇವರ ಮಹಿಮೆಗಾಗಿ ಕಟ್ಟಲು "ಬಂಗಾರ, ಬೆಳ್ಳಿ, ಬೆಲೆಬಾಳುವ ಹರಳುಗಳ" ಮೇಲೆ ಕಟ್ಟಿದಂತೆ. ಕ್ರಿಸ್ತನ ಮೇಲೆ ನಿಷ್ಠೆಯಿಂದ ಕಟ್ಟುವದಕ್ಕೆ ಬದಲಾಗಿ ಪೌಲ ಅಥವಾ ಅಪೊಲ್ಲೋಸನ ಮೇಲೆ ನಿಷ್ಠೆಯಿಂದ ಕಟ್ಟುವದು ಮಾನವನ ವಿಭಾಗಿಸುವ ಜ್ಞಾನವನ್ನು ಆಯ್ದುಕೊಳ್ಳುವದಾಗಿದೆ. **ಕಟ್ಟಿಗೆ, ಹುಲ್ಲು** ಅಥವಾ **ಆಪು** ಇವುಗಳಿಂದ ಕಟ್ಟುವದಾಗಿದೆ ಅದು ಸೃಷ್ಟಿ ಕರ್ತನಿಗೆ ಅಯೋಗ್ಯವಾಗಿದೆ. ಕ್ರಿಸ್ತನು ತನ್ನ ಸಭೆಯನ್ನು ಆತ್ಮೀಕ ಸಲಕರಣೆಗಳಿಂದ ಕಟ್ಟಿದ್ದಾನೆ ಅದು ಲೋಕವು ಅದರ ವಿರೋಧವಾಗಿ ತರುವ ಯಾವುದನ್ನಾದರು ಎದುರಿಸಿ ನಿಲ್ಲುತ್ತದೆ. ಮನುಷ್ಯರು ತಮ್ಮ ಇಚ್ಛೆಯಂತೆ ಸಭೆಯನ್ನು ಆಧುನೀಕರಣಗೊಳಿಸುವಾಗ, ಅದು ಮುರಿದುಹೋಗುತ್ತದೆ ಅಥವಾ ಸುಟ್ಟು ಹೋಗುತ್ತದೆ ಎಂದು ಪೌಲನು ಪ್ರಕಟಿಸುತ್ತಾನೆ. ಅಪೊಸ್ತಲನ ವಿಷಯ ಸಂಪೂರ್ಣವಾದ ಸಭೆಯಾಗಿದೆ, ಸಭೆಯಲ್ಲಿರುವ ಒಬ್ಬಬ್ಬೊ ಸದಸ್ಯರಲ್ಲ. ಕ್ರೈಸ್ತರು ತಮ್ಮ ಸ್ವಂತ ನೀತಿವಂತಿಕೆಯಿಂದಾಗಿ ವಯಕ್ತಿಕವಾಗಿ ರಕ್ಷಣೆಯನ್ನು ಹೊಂದಿಲ್ಲ. ಎಲ್ಲಾ ದೇವರ ಕೃಪೆಯಿಂದಲೇ. ಎಲ್ಲರಿಗೂ "ಕಟ್ಟಿಗೆ," "ಹುಲ್ಲು" ಅಥವಾ.

"ಆಪು" ಅಳತೆಗೋಲಾಗಿದೆ. ಅವನು ತಾನು ಹಾಕಿದ ಅಸ್ತಿವಾರದ ಮೇಲೆ ಕಟ್ಟುವದರ ಕುರಿತು ಎಚ್ಚರಿಕೆ ನೀಡುವಾಗ ಹೌದು, ಪೌಲನು ದೇವ ಜನ, ಸಭೆಯ ಸಮುದಾಯದ ಕುರಿತಾಗಿ ಮಾತನಾಡುತ್ತಿದ್ದಾನೆ. ಅವನು ಕೊರಿಂಥದಲ್ಲಿರುವ ಸಭೆಯ ಕುರಿತಾಗಿ ಏನು ಮಾತನಾಡುತ್ತಿದ್ದಾನೆ ಎಂದರೆ ಅದು ಪ್ರತಿಯೊಂದು ಸ್ಥಳದಲ್ಲಿರುವ ಸಭಿಕರಿಗೆ ಅಥವಾ ಜಾಗತಿಕವಾಗಿ ವ್ಯಾಪ್ತಿಯಲ್ಲಿರುವ ಸಭೆಗಳಿಗೆ ಸಮಾನವಾದ ಪರಿಣಾಮ ಬೀರುತ್ತದೆ. ಇದು ವಯಕ್ತಿಕವಾಗಿ ಕ್ರೈಸ್ತರಿಗೆ ಅವರು ಕ್ರಿಸ್ತನನ್ನು ಸ್ವೀಕರಿಸಿದ ಪ್ರಾರಂಭದಲ್ಲಿ ಎಚ್ಚರಿಕೆಯಿಂದ ಕಟ್ಟುವದು ಪ್ರಶಂಸನೀಯವಗಿದೆ, ಈ ಸನ್ನಿವೇಶದಲ್ಲಿ ಪೌಲನು ವ್ಯಕ್ತಿಗಳು ತಮ್ಮ ಸ್ವಂತ ನಂಬಿಕೆಯನ್ನು ಕಟ್ಟುವದರ ಕುರಿತಾಗಿ ಮಾತನಾಡುತ್ತಿಲ್ಲ.

**ವಚನ 13.** 3:12ರಲ್ಲಿ, ಪೌಲನು ಶರತ್ತಿನ ಒಂದು ವಾಕ್ಯವನ್ನು ಹೇಳುತ್ತಾನೆ, "ಈಗ, ಯಾವನಾದರೂ ಕಟ್ಟುವುದಾದರೆ . . ." ಕೆಲವು ಸಾಧ್ಯತೆಗಳನ್ನು ಪಟ್ಟಿಮಾಡಿದ ನಂತರ,

ಈಗ ಅವನು ತನ್ನ ವಿಚಾರವನ್ನು ಪೂರ್ತಿಗೊಳಿಸಲು ಸಿದ್ದನಾಗಿದ್ದಾನೆ. ಕಟ್ಟುವವನು ಯಾವ ವಿಧದ ಕಾರ್ಯವನ್ನು ಮಾಡುತ್ತಾನೋ ಅದು ತಕ್ಷಣದಲ್ಲಿ ಪ್ರಕಟವಾಗುವದಿಲ್ಲ; ಸರಿಯಾದ ಸಮಯದಲ್ಲಿ, ಹ್ಯಾಗೂ, **ಪ್ರತಿಯೊಬ್ಬ ಮನುಷ್ಯನ ಕಾರ್ಯದ ಗುಣಮಟ್ಟ ಪ್ರಕಟವಾಗುತ್ತದೆ.** ಗ್ರೀಕ್‌ನಲ್ಲಿ ರೀತಿಯ ಶರತ್ತುಬದ್ಧವಾಕ್ಯ, ಪೀಠಿಕಾ ವಾಕ್ಯ ("ಒಂದುವೇಳೆ" ಎಂಬ ವಾಕ್ಯಭಾಗದಿಂದ) ಸತ್ಯವೆಂದು ಊಹಿಸಲಾಗುತ್ತದೆ. ಕೊರಿಂಥದಲ್ಲಿರುವ ಬೋಧಕರು, ಪೌಲನು ಹಾಕಿದ ಅಸ್ತಿವಾರದ ಮೇಲೆ ವಿವಿಧ ವಿಧದಲ್ಲಿ ಕಟ್ಟಿದರು. ಖಚಿತತೆ ಯಾವುದೆಂದರೆ, **ಸರಿಯಾದ ಸಮಯದಲ್ಲಿ, ಪ್ರತಿಯೊಬ್ಬ ಮನುಷ್ಯನು ಕಟ್ಟಿರುವದನ್ನು ಬೆಂಕಿಯು ಪ್ರಕಟಿಸುವದು.**

ದೇವರು ಆದುಕೊಂಡ ದಿನದಲ್ಲಿ, ಪ್ರತಿಯೊಬ್ಬ ಮನುಷ್ಯನ ಕಾರ್ಯವು ಪರೀಕ್ಷಿಸಲಾಗುವದು. ಪೌಲನ ಎಚ್ಚರಿಕೆಯ ವಿಶಾಲವಾದ ರೂಪರೇಷೆ ಸ್ಪಷ್ಟವಾಗಿದೆ ಆದರೆ ಆತನ ವಿವೇಚನೆ ಪೂರಕ ಸಮಂಜಸತೆಯನ್ನು ತೆಗೆದುಕೊಳ್ಳುತ್ತದೆ ಒಬ್ಬನು ತನ್ನ ಮಾತುಗಳನ್ನು ಎಚ್ಚರಿಕೆಯಿಂದ ಪರೀಕ್ಷಿಸುವಾಗ. ಉದಾಹರಣೆಗೆ, "ಬೆಂಕಿಯೊಡನೆ ಉದಯವಾಗಿ ಆ ಕೆಲಸವನ್ನು ಸ್ಪಷ್ಟವಾಗಿ ತೋರಿಸುವದು" ಎಂಬ ವಾಕ್ಯಭಾಗದಲ್ಲಿ "ಅದು" ಎಂಬ ಸರ್ವನಾಮಪದದ ಮುಂದೂತನನ್ನು ನಿರ್ಧರಿಸುವದು ಕಠಿಣವಾಗುತ್ತದೆ. ಬೆಂಕಿಯಲ್ಲಿ ಯಾವುದು ಪ್ರಕಟವಾಗುತ್ತದೆ? ಬಹುಶಃ ಪ್ರತಿಯೊಬ್ಬ ಮನುಷ್ಯನ ಕೆಲಸ ಬೆಂಕಿಯಲ್ಲಿ ಪ್ರಕಟವಾಗುವದು ಅಥವಾ ಪೌಲನು ಆ ದಿನವು ಬೆಂಕಿಯೊಂದಿಗೆ ಪ್ರಕಟವಾಗುವದು ಅರ್ಥ ಎಂದು ಹೇಳಿರಬಹುದು. ಎರಡೂ ಸನ್ನಿವೇಶದಲ್ಲಿ ಉತ್ತಮವಾಗಿ ಹೊಂದಿಕೊಳ್ಳುತ್ತವೆ; ಆದರೆ ಬೆಂಕಿಯು ಸಾಮಾನ್ಯವಾಗಿ ನ್ಯಾಯತೀರ್ಪಿನ ದಿನದೊಂದಿಗೆ ಜೋಡಣೆಯಾಗಿರುವಾಗ (2 ಥೆಸಲೋನಿಕ 1:7; ಇಬ್ರಿಯ 10:27 ನೋಡಿರಿ), ಅಪೊಸ್ತಲನು ಕರ್ತನು ಜಗತ್ತಿಗೆ ನ್ಯಾಯತೀರಿಸಲು ಬರುವ ಕರ್ತನ ದಿನವು ಬೆಂಕಿಯೊಂದಿಗೆ ಬರುತ್ತದೆ. ಬೆಂಕಿಯು ಅನೇಕ ಅಶುದ್ಧತ್ವಗಳನ್ನು ಸ್ವಚ್ಛಗೊಳಿಸುತ್ತದೆ ಮತ್ತು ಯಥಾರ್ಥವಾದದ್ದನ್ನು ಇನ್ನೂ ವೈಭವ ಮತ್ತು ಬಲದೊಂದಿಗೆ ಉಳಿಸುತ್ತದೆ.

"ಆ ದಿನ" "ಪ್ರತಿಯೊಬ್ಬ ಮನುಷ್ಯನ ಕೆಲಸವು ಪ್ರಕಟ" ವಾಗುವಾಗ ಅದು ಬಹುಶಃ ಕರ್ತನು ತಿರುಗಿ ಬರುವ ದಿನವಾಗಿದೆ, ಆದರೆ ಇಲ್ಲಿ ಇನ್ನೊಂದು ಸಾಧ್ಯತೆ ಇದೆ. ಅಪೊಸ್ತಲನು ಬಹಳ ಮಟ್ಟಿಗೆ ಸಭೆಯು ವಿಚಾರಣೆಯನ್ನು ಎದುರಿಸುವ ಸಮಯವನ್ನು ಉಲ್ಲೇಖಿಸುತ್ತಿರಬಹುದು. "ಬೆಂಕಿ" ಪರೀಕ್ಷಿಸುವದಕ್ಕೆ ರೂಪಕ ಅಲಂಕಾರವಾಗಿರಬಹುದ (1 ಪೇತ್ರ 1:7 ನೋಡಿರಿ). ಪರೀಕ್ಷೆ ಹಿಂಸೆಯ ಮೂಲಕ ದೈವಿಕರಲ್ಲದವರಿಗೆ ಬರಬಹುದು, ಸುಳ್ಳುಬೋಧಕರಿಂದ ಮಂಡಿಸಲಾದ ಸವಾಲುಗಳು ಅಥವಾ ಕ್ರೈಸ್ತರ ನಡುವೆ ಇರುವ ಒಳಗಿನ ಜಗಳಗಳಿಂದಾಗಿರಬಹದು. ಕ್ರಿಸ್ತನ ಅಸ್ತಿವಾರದ ಮೇಲೆ ಒಬ್ಬನು ಕಟ್ಟುವ ಕಟ್ಟಡವು ವಿಶ್ವಾಸಿಗಳ ಈ ಜೀವಿತದಲ್ಲಿ ಶೋದನೆಯನ್ನು ಸಹಿಸುವ ಸಾಮರ್ಥ್ಯದೊಂದಿಗೆ ಬಹಳಷ್ಟು ವ್ಯವಹರಿಸುವಂಥದ್ದಾಗಿದೆ. ಪೌಲನು, ಈ ಅಂಶವನ್ನು ಮೂರು ಹಂದಿಗಳು ತಮ್ಮ ಮನೆಯನ್ನು ಹುಲ್ಲು, ಕಟ್ಟಿಗೆ ಮತ್ತು ಇಟ್ಟಿಗೆಯಿಂದ ಕಟ್ಟಿದ ಮಕ್ಕಳ ಕಥೆಗಿಂತ6 ಹೆಚ್ಚು ವಿಭಿನ್ನವಾಗಿಲ್ಲ ಎಂಬುದನ್ನು ತಿಳಿಸುತ್ತಿದ್ದಾನೆ. ಆ ಕಥೆಯಲ್ಲಿ ಒಂದು ದಿನ ಬರುತ್ತದೆ ಒಂದು ತೋಳವು ಪ್ರತಿಯೊಂದು ಹಂದಿಗಳ ಮನೆ ಬಾಗಿಲಿಗೆ ಬರುತ್ತದೆ; ಪರೀಕ್ಷೆಯ ಆ ದಿವಸ ಕಟ್ಟಡಕ್ಕೆ ಉಪಯೋಗಿಸಿದ ಸಲಕರಣೆಗಳ ವಿಧದ ಯೋಗ್ಯತೆಯನ್ನು ತೋರಿಸುತ್ತದೆ.

ಅದರಂತೆ, ಪ್ರತಿಯೊಬ್ಬ ಕ್ರೈಸ್ತರಿಗೂ ಪರೀಕ್ಷೆಯ ದಿನವು ಬರುತ್ತದೆ, ಅವರ ಕುಟುಂಬಗಳಿಗೆ ಮತ್ತು ಅವರು ಸ್ಥಾಪಿಸಿದ ಸಭಿಕರಿಗೆ. ವಯಕ್ತಿಕ ಮನೆಗಳು, ಸಭೆಗಳು ಆ ಪರೀಕ್ಷೆಯ ದಿನಗಳಲ್ಲಿಅವರು ನಂಬಿಕೆ ಮತ್ತು ಆತ್ಮನು ಪ್ರಕಟಿಸುವ ನಡತೆಯ ಮೇಲೆ ಯಾವ ಮಟ್ಟದಲ್ಲಿ ಕಟ್ಟಿದಾರೋ ಅಷ್ಟು ಬಲವಾಗಿ ನಿಂತುಕೊಳ್ಳುತ್ತವೆ. ಯಾರು ದೇವರ ಪ್ರಕಟನೆಗಳನ್ನು ತಿಳಿದು ಅದಕ್ಕೆ ವಿಧೇಯರಾಗಿದ್ದಾರೋ ಶೋಧಕನು ಅವರಿಗೆ ಯಾವ ಶೋಧನೆಯನ್ನು ತರುತ್ತಾನೋ ಅದಕ್ಕೆ ಅವರು ಸಿದ್ದರಾಗಿರುತ್ತಾರೆ.

**ವಚನ 14.** ಮೊದಲು, ಪೌಲನು "ಬಹುಮಾನ" ಮತ್ತು "ಕೂಲಿ" ಯ ಕುರಿತಾಗಿ ಬರೆದಿದ್ದಾನೆ ಇಬ್ಬರಿಗೂ ಯಾರು ಸುವಾರ್ತೆಯ ಬೀಜವನ್ನು ಬಿತ್ತಿದ್ದಾರೋ ಮತ್ತು ಯಾರು ನೀರನ್ನು ಉಣಿಸಿದ್ದಾರೋ ಮತ್ತು ಬೀಜವನ್ನು ಪೋಷಿಸಿದ್ದಾರೋ ಅವರಿಗೆ (3:8). "ಬಹುಮಾನ" ಎಂಬ ಪದವು ತಪ್ಪಾದ ರೀತಿಯಲ್ಲಿ ನಡೆಸಿಕೊಳ್ಳುವದಲ್ಲ. ಬೆಂಕಿಯು ಪ್ರತಿಯೊಬ್ಬ ಮನುಷ್ಯನ ಕೆಲಸದ ಗುಣಮಟ್ಟವನ್ನು ಪರೀಕ್ಷಿಸುವಾಗ, ಬಲವಾದದ್ದರ ಮೇಲೆ ಕಟ್ಟಿದ್ದವರು **ತಮ್ಮ ಶ್ರಮಕ್ಕೆ ಬಹುಮಾನ ಹೊಂದುತ್ತಾರೆ**. ಪೌಲನ ಯೋಚನೆಯಲ್ಲಿ ಒಂದು ಅಳತೆಯ ಒತ್ತಡ ತೋರಿಬರುತ್ತದೆ: ರಕ್ಷಣೆಯು ದೇವರ ಕೃಪೆಯ ವಿಷಯವಾಗಿದೆ (ಎಫೆಸ 2:8). ದೇವರು ತನ್ನ ಕೃಪೆಯನ್ನು ಯಾರು ಪ್ರೀತಿ ಮತ್ತು ನಂಬಿಕೆಯ ಪರಿಣಾಮವಾಗಿ ಸುವಾರ್ತೆಗೆ ವಿಧೇಯತೆಯನ್ನು ತೋರಿಸುತ್ತಾರೋ ಅಂಥಹ ಪಾಪಿಗಳ ಮೇಲೆ ತನ್ನ ಕೃಪೆಯನ್ನು ಧಾರಾಳವಾಗಿ ಸುರಿಸುತ್ತಾನೆ.

ಕಟ್ಟಿಗೆ, ಹುಲ್ಲು ಅಥವಾ ಆಪು ರಹಸ್ಯವಾಗಿರುತ್ತದೆ, ಇದರಿಂದಾಗಿ ಅದು ಆ ಸಮಯದಲ್ಲಿ ಉತ್ತಮವಾಗಿ ಕಟ್ಟಿದ ರಚನೆಯಾಗಿ ತೋರಿಬರುತ್ತದೆ. ಸಭೆಯ ಕಟ್ಟಡದ ಸಲಕರಣೆಗಳ ಕುರಿತು ಪೌಲನ ಎಚ್ಚರಿಕೆಗೆ ಗಮನ ನೀಡುವಾಗ, ಅದು ನಿರಂತರವಾದ ಸ್ವ-ಪರೀಕ್ಷೆಯಲ್ಲಿ ತೊಡಗಿಕೊಳ್ಳುತ್ತದೆ. ಸ್ವ-ಪರೀಕ್ಷೆಗೆ ಸ್ಥಳವನ್ನು ಕಂಡುಕೊಳ್ಳುವದು ಕಠಿಣವಾದದ್ದೇನು ಅಲ್ಲ. ಸಭೆಯ ಸಮೂಹ ಆರಾಧನೆಗಾಗಿ ಕೂಡಿಬಂದವರು ಮನೋರಂಜನೆಯನ್ನು ಬಯಸುವದಾದರೆ ಒದಗಿಸುತ್ತದೆಯೋ? ದೇವರ ಕುರಿತಾದ ನಮ್ಮ ಭಾವನೆಗಳು ಸತ್ಯದ ಕುರಿತು ನಮ್ಮ ಕಳಕಳಿಯನ್ನು ಮತ್ತು ಜ್ಞಾನದ ಕುರಿತು ನಮ್ಮ ಬಯಕೆಯನ್ನು, ಕ್ರೈಸ್ತ ನಂಬಿಕೆಯನ್ನು ಸರಿದೂಗಿಸುತ್ತದೋ? ಅಪೊಸ್ತಲರ ಅಸ್ತಿವಾರದ ಮೇಲೆ ಎಚ್ಚರಿಕೆಯಿಂದ ಕಟ್ಟುವ ಕ್ರೈಸ್ತರ ಅವಶ್ಯಕತೆ ಕೊರಿಂಥದವರಿಗೆ ಪೌಲನು ಬರೆದ ಪತ್ರದೊಂದಿಗೆ ಮುಕ್ತಾಯವಾಗುವದಿಲ್ಲ.

**ವಚನ 15.** ನ್ಯಾಯತೀರ್ಪಿನ ಬೆಂಕಿ ಬರುವಾಗ ಮತ್ತು ಪ್ರತಿಯೊಬ್ಬ ಮನುಷ್ಯನ ಕೆಲಸದ ಗುಣಮಟ್ಟ ಎಂಥದ್ದೆಂದು ತೋರಬರುತ್ತದೆ. ಕಟ್ಟಿಗೆ, ಹುಲ್ಲು ಮತ್ತು ಆಪುಗಳಿಂದ ಕಟ್ಟಿದ ಬೋಧಕರು ತಮ್ಮ ಕೆಲಸವು **ಸುಟ್ಟುಹೋಗುವದನ್ನು** ನೋಡುತ್ತಾರೆ. ದೇವರ ಮಹಿಮೆಗಾಗಿ ಜೀವಿಸಿದ ಅನೇಕರು ಬದಲಾಗಿ, ತಮ್ಮನ್ನು ತಾವು ಲೋಕದೊಂದಿಗೆ ವಿವಾಹಕ್ಕೆ ಅನುಮತಿಸಿದ್ದಾರೆ ಎಂಬುದನ್ನು ಗುರುತಿಸಿಕೊಳ್ಳುತ್ತಾರೆ.

ಅವರ ಬೋಧಕರು ಸ್ವದೂಷಣೆಯ ನಷ್ಟವನ್ನು ಅನುಭವಿಸುತ್ತಾರೆ; ಅವರು ತಾವು ತಪ್ಪಿಹೋದವರನ್ನು ನಿತ್ಯಜೀವಕ್ಕೆ ತರುವದರಲ್ಲಿ ಕರ್ತನೊಂದಿಗೆ ನಂಬಿಗಸ್ತ ಸಹಭಾಗಿಗಳಾಗುವದರಲ್ಲಿ ವಿಫಲರಾಗಿದ್ದೇವೆ ಎಂಬುದನ್ನು ಕಂಡುಕೊಳ್ಳುತ್ತಾರೆ. ಓದುಗರು ಯಾರು ಯೇಸುವನ್ನು ಸ್ವಂತ ಕರ್ತನೆಂದು ಹೊಂದಿಕೊಂಡಿದ್ದಾರೋ ಅವರಿಗೆ ಪೌಲನು

ಅಮೂರ್ತವಾದ, ಪ್ರಾಪಂಚಿಕ ಉದಾಹರಣೆಯನ್ನು ಅವಶ್ಯವಾಗಿರುವ ಜವಾಬ್ದಾರಿಗಳನ್ನು ನಿವೇದಿಸಲು ಉಪಯೋಗಿಸುತ್ತಾನೆ. ಜೇಮ್ಸ್ ಡಿ. ಜಿ. ಡೌನ್ನ ಪೌಲನ ಅಲಂಕಾರಿಕ ಭಾಷೆಯ ಕಡಿಮೆಕಡಿಮೆ ಸಂಪೂರ್ಣ ಲೆಕ್ಕವನ್ನು ತಾನು ಬರೆಯುವಾಗ ತೆಗೆದುಕೊಳ್ಳುತ್ತಾನೆ, ಮತ್ತು ವಿಶ್ವಾಸಿಗಳಾಗಿದ್ದಾಗಲೂ, ಅವರ ಜೀವಿತದ ಗುಣಮಟ್ಟ, ಅವರು ಕೇವಲ ಎಳೆಯ ಅಂತರದಲ್ಲಿ ರಕ್ಷಣೆಯನ್ನು ಹೊಂದಿರಬಹುದು[7] ಎಂದು ತೋರಿಬರುತ್ತದೆ, ರಕ್ಷಣೆಯ ಕುರಿತು ಹೇಳುವದರ ಬದಲಾಗಿ "ಒಂದು ಎಳೆಯಲ್ಲಿ" ಅಪೊಸ್ತಲನು ಆ ಕೃಪೆ ಮಾನವನ ತಪ್ಪುಗಳಿಗೆ ಭತ್ಯವನ್ನು ನೀಡುತ್ತದೆ ಎಂದು ತೋರಿಸುತ್ತಾನೆ. ಯಥಾರ್ಥವಾಗಿ ಒಳ್ಳೇತನವನ್ನು ಹೊಂದಿರುವ ಜನರು ಮತ್ತು ಆಳವಾದ ನಂಬಿಕೆ ಕೆಲವೊಮ್ಮೆ ಕಳಪೆ ಆಯ್ಕೆಯನ್ನು ಮಾಡುತ್ತದೆ. ಉತ್ತಮ ಉದ್ದೇಶಗಳಿದ್ದಾಗ್ಯೂ, ಒಬ್ಬನು ದೇವ ಜನರ ಹಾನಿಗೆ ಕಾರಣನಾಗಬಹುದು, ಮನುಷ್ಯನ ಹೃದಯವನ್ನು ನೋಡುವ ದೇವರು, ತನ್ನ ಕೆಲಸಗಾಗರನ್ನು ಅವರು ಬುದ್ದೀಹೀನರಾಗಿ ವರ್ತಿಸಿದ್ದಾಗ್ಯೂ ರಕ್ಷಿಸುತ್ತಾನೆ.

ಗೂಡಾರ್ಥವಿದ್ದಾಗ್ಯೂ, **ಬೆಂಕಿಯ ಮೂಲಕ** ದೃಢತೆಯನ್ನು ಬೇರ್ಪಡಿಸಲು ಆಗುವದಿಲ್ಲ, ದೇವ ಕೃಪೆಯ ಮೂಲಕ, ಅವರ ಕೊಡುಗೆ ಚಿಕ್ಕದಾಗಿದ್ದರೂ ಅಥವಾ ದೇವರ ಸಭೆಯನ್ನು ಕಟ್ಟುವದರಲ್ಲಿ ಏನೂ ಅಲ್ಲವಾಗಿದ್ದರೂ ಕೆಲವರು ರಕ್ಷಣೆಹೊಂದುತ್ತಾರೆ. ಅಪೊಸ್ತಲನು ಕೃಪೆಯನ್ನು ದೃಢೀಕರಿಸುತ್ತಿದ್ದಾನೆ, ನ್ಯಾಯಬದ್ಧವಾಗಿ ಗಳಿಸಬೇಕಾದ ಮೆಚ್ಚಿಗೆಯಲ್ಲ. ಅದೇ ಸಮಯದಲ್ಲಿ, ಆತನು ಯಾರು ಕಟ್ಟಲು ಬಯಸುತ್ತಾರೋ ಅವರಿಗೆ ಜ್ಞಾಪಿಸುತ್ತಾನೆ - ದೇವ ಜನರಿಗೆ ಯಾರು ಬೋಧಿಸುತ್ತಾರೋ - ಅವರು ಎಚ್ಚರಿಕೆಯಿಂದ ಇರಬೇಕು ಇದರಿಂದಾಗಿ ಅವರು ನಷ್ಟವನ್ನು ಅನುಭವಸುವದಿಲ್ಲ. ಅವರ ಪ್ರಯತ್ನಗಳು ಲಾಭವಿಲ್ಲದೇ ಹೋಗುವದು ಅವನು ಬಯಸುದಿಲ್ಲ. ಕೆಲವರು ಪೌಲ ಮಾತುಗಳಿಗೆ ಬರಲಿಕ್ಕಿರುವ ಲೋಕದಲ್ಲಿ ಒಂದು ಮಧ್ಯಸ್ತಿಕೆಯ ಸ್ಥಳವಿದೆ ಎಂಬುದರ ಸಾಕ್ಷಿಯನ್ನು ನೋಡಿದ್ದಾರೆ, ಪರಲೋಕಕ್ಕಾಗಲಿ ಅಥವಾ ನರಕಕ್ಕಾಗಲಿ ಹೋಗದೆ ಇರುವವರ ಸ್ಥಳ. ಅಪೊಸ್ತಲರ ಕಾಲದ ನಂತರದ ಕೆಲವು ಶತಮಾನಗಳಲ್ಲಿ ಮರಣಾನಂತರದ ಪ್ರಾಯಶ್ಚಿತ್ತದ ಸ್ಥಳದ ವಿಚಾರ ಪ್ರಗತಿಹೊಂದಿತು. ಪೌಲನ ಮಾತುಗಳು, "ತಾನಾದರೋ ರಕ್ಷಣೆ ಹೊಂದುವನು. ಆದರೆ ಬೆಂಕಿಯೊಳಗಿಂದ ತಪ್ಪಿಸಿಕೊಂಡವನ ಹಾಗಿರುವನು" ಕೆಲವರಿಗೆ ಮರಣಾ ನಂತರದ ಸ್ಥಳವಿದೆ ಎಂಬುದನ್ನು ಸೂಚಿಸುತ್ತದೆ "ಆದಾಗ್ಯೂ ಅದರಂತೆ" ಎಂಬ ವಾಕ್ಯಭಾಗಗಳು ಅಪೊಸ್ತಲನ ಹೇಳಿಕೆಯ ಅಲಂಕಾರಿಕ ಸ್ವರೂಪವನ್ನು ಸೂಚಿಸುತ್ತವೆ. ವಾಸ್ತವತೆಯಲ್ಲಿ ಶುದ್ದೀಕರಣದ ಬೆಂಕಿ ಎಂದರ್ಥವಲ್ಲ.

## "ನೀವು ದೇವರ ಆಲಯವಾಗಿದ್ದೀರಿ" (3:16, 17)

**16ನೀವು ದೇವರ ಆಲಯವಾಗಿದ್ದೀರೆಂದೂ ದೇವರ ಆತ್ಮನು ನಿಮ್ಮಲ್ಲಿ ವಾಸಮಾಡುತ್ತಾನೆಂದೂ ನಿಮಗೆ ಗೊತ್ತಿಲ್ಲವೋ? 17ಯಾವನಾದರೂ ದೇವರ ಆಲಯವನ್ನು ಕೆಡಿಸಿದರೆ ದೇವರು ಅವನನ್ನು ಕೆಡಿಸುವನು. ಯಾಕಂದರೆ ದೇವರ ಆಲಯವು ಪವಿತ್ರವಾದದ್ದು. ಆ ಆಲಯವು ನೀವೇ.**

**ವಚನ 16.** ದೇವರ ಆಲಯದಲ್ಲಿ ದೇವರ ಆತ್ಮನು ನೆಲೆಸುತ್ತಾನೆ ವಯಕ್ತಿಕ

ವಿಶ್ವಾಸಿಯಲ್ಲಿ ಅಲ್ಲ, ಕನಿಷ್ಠ ಈ ವಚನದಲ್ಲಿ. “ದೇವರ ಆಲಯ” ಸಭೆಯಾಗಿದೆ, ವಿಶ್ವಾಸಿಗಳ ಸಮುದಾಯ, ಪ್ರಸ್ತುತ ಸಾಮ್ಯದಲ್ಲಿ, ಸಭೆಯ ಸದಸ್ಯರು ಕಟ್ಟಡವಾಗಿದ್ದಾರೆ ಅದರಲ್ಲಿ ಆತ್ಮನು ನೆಲೆಸುತ್ತಾನೆ. ಆತ್ಮನು, ಪೌಲನು ಹೇಳುತ್ತಾನೆ, **ನಿಮ್ಮಲ್ಲಿ ನೆಲೆಯಾಗಿದ್ದಾನೆ**, ಬಹುವಚನ (ἐν ὑμῖν, *en humin*). ಸರ್ವನಾಮ ಎರಡೂ ವಚನಗಳಲ್ಲಿ 16 ಮತ್ತು 17ರಲ್ಲಿ ಕಂಡುಬರುತ್ತವೆ. ದೇವ ಜನರಲ್ಲಿ ಅವಶ್ಯವಿರುವ ಐಕ್ಯತೆಯ ಕುರಿತು ಅಪೊಸ್ತಲನು ವಾದವಿವಾದಮಾಡುವದನ್ನು ಮುಂದುವರೆಸುತ್ತಾನೆ ಅದು 1:10ರಲ್ಲಿ ದೇವರು ತನ್ನ ಆಲಯದಲ್ಲಿ ವಾಸಿಸುತ್ತಾನೆ ಎಂಬ ತಿಳುವಳಿಕೆ, ಎಲ್ಲಾ ವಿಶ್ವಾಸಿಗಳಿಂದ ರಚಿಸಲ್ಪಟ್ಟ ದೇವಾಲಯ, ಕ್ರೈಸ್ತರು ಒಟ್ಟಾಗಿ ಕಟ್ಟಲ್ಪಟ್ಟಿದಾರೆ ಯಾಕಂದರೆ ಅವರು ದೇವರೊಂದಿಗೆ ಕಟ್ಟಲ್ಪಟ್ಟಿದ್ದಾರೆ. ಕೇಫ, ಪೌಲ ಮತ್ತು ಅಪೊಲ್ಲೋಪೊಸ ಇವರಿಗೆ ನಿಷ್ಠೆಯನ್ನು ತೋರಿಸಿಕೊಂಡು ಪಂಗಡಗಳಾಗಿ ವಿಭಾಗಿಸಲ್ಪಟ್ಟರೆ ಅದು ಕರ್ತನಿಗೆ ಅಗೌರವ ತೋರಿಸಿದಂತೆ. ಪತ್ರಿಕೆಯಲ್ಲಿ ಮುಂದೆ, ವಯಕ್ತಿಕ ವಿಶ್ವಾಸಿಗಳ ನೈತಿಕ ನಡೆತೆಗೆ ವಿಷಯ ಬದಲಾವಣೆಯಾಗುವಾಗ (6:19), ದೇವಾಲಯವು ವಯಕ್ತಿಕ ಕ್ರೈಸ್ತರು ಎಂದು ಹೇಳಲ್ಪಟ್ಟಿದೆ. ಆತ್ಮನು ಕ್ರೈಸ್ತರಲ್ಲಿ ವಯಕ್ತಿಕವಾಗಿ ವಾಸಿಸುತ್ತಾನೆ ಆದರೆ ವಿಷಯ ಈಗ ಇರುವಂಥದಲ್ಲ.

ರಿಚರ್ಡ ಬಿ. ಹೇಸ್ ಪೌಲನ ಎಚ್ಚರಿಕೆಯನ್ನು ಉತ್ತಮವಾಗಿ ಸೆರೆಹಿಡಿದಿದ್ದಾರೆ:

> ಪುನರುತ್ಥಾನ ಮತ್ತು ಯೇಸು ಕ್ರಿಸ್ತನ ಎರಡನೇ ಆಗಮನ ಮಧ್ಯದ ವಿರಾಮ ಕಾಲದಲ್ಲಿ ದೇವರು ಲೋಕದಲ್ಲಿ ಏನು ಮಾಡುತ್ತಿದ್ದಾನೆ? ಪೌಲನ ಪ್ರಕಾರ, ದೇವರು ಆತ್ಮನ ಮೂಲಕ ಮುಂಚಿತವಾಗಿ ಊಹಿಸುವ ಮತ್ತು ಮರುಸಂಧಾನಕ್ಕೆ ಒಟ್ಟುಗೂಡಿಸಲು ಮತ್ತು ಲೋಕವನ್ನು ಸ್ವಸ್ಥಪಡಿಸಲು ಸಮುದಾಯಗಳನ್ನು ಸೃಷ್ಟಿಸುವ ಕಾರ್ಯದಲ್ಲಿ ತತ್ಪರನಾಗಿದ್ದಾನೆ. ದೇವರ ಪ್ರೀತಿಯ ಫಲ ಎಂದರೆ ಅರಿಕೆಮಾಡುವ, ಆರಾಧಿಸುವ ಮತ್ತು ದೇವರನ್ನು ಮಹಿಮೆ ಪಡಿಸುವ ಹಾಗೆ ಒಟ್ಟಾಗಿ ಪ್ರಾರ್ಥಿಸುವ ಸಮುದಾಯಗಳನ್ನು ರಚಿಸುವದು (ಉದಾಹರಣೆ, ರೋಮಾ 15:7-13 ನೋಡಿರಿ).[8]

**ವಚನ 17.** ಅಪೊಸ್ತಲನು ತನ್ನ ವಾದವನ್ನು ಮೃದುವಾದ ಎಚ್ಚರಿಕೆಯನ್ನು ನೀಡುವದರ ಮೂಲಕ ಕ್ರೂಡಿಕರಿಸುತ್ತಾನೆ: ದೇವರು ಆಲಯವನ್ನು ಅಪವಿತ್ರಗೊಳಿಸುವದನ್ನು ಹಗುರವಾಗಿ ತೆಗೆದುಕೊಳ್ಳುವದಿಲ್ಲ. ಸಣ್ಣ ನಿಷ್ಠೆಗಳ ಆಧಾರದ ಮೇಲೆ ಸಭೆಯನ್ನು ವಿಭಾಗಿಸುವದು ಅದನ್ನು ನಾಶಗೊಳಿಸುವದಾಗಿದೆ. ಯಾರು ದೇವಾಲಯವನ್ನು ಪವಿತ್ರಗೊಳಿಸುತ್ತಾರೋ **ದೇವರು ಅವರನ್ನು ನಾಶಮಾಡುತ್ತಾನೆ**. ದೇವರು ವಾಸಿಸುವ ಸ್ಥಳದ ಪವಿತ್ರತೆಯನ್ನು ಉಲ್ಲಂಘಿಸುತ್ತಾನೋ ಅವನಿಗೆ ಪೌಲನು, ಯಾವ ಅನುಕಂಪವನ್ನು ತೋರಿಸುವದಿಲ್ಲ. ಅಂಥಹ ಮನುಷ್ಯನಿಗೆ ಹಗುರವಾದ ಶಿಕ್ಷೆಯಾಗಬೇಕು ಇಲ್ಲವೇ ಅವನು ಹಾಗೆಯೇ ರಕ್ಷಿಸಲ್ಪಡಬೇಕು ಎಂದು ರಿಯಾಯಿತಿ ತೋರಿಸುವದಿಲ್ಲ. ದೇವರ ಸಭೆ ಪರಿಶುದ್ದವಾದ ಸ್ಥಳವಾಗಿದೆ. ಪೌಲನು ಈ ಸಾಮ್ಯವನ್ನು ವಿಸ್ತರಿಸಿ ವರ್ಷಗಳು ಗತಿಸಿಹೋದವು, ಅವನು ಹೇಳುತ್ತಾನೆ ನೀವು “ಜೀವದ ಕಲ್ಲುಗಳು” ನೀವು “ಆತ್ಮಸಂಬಂಧವಾದ ಮಂದಿರವಾಗುವದಕ್ಕೆ ಕಟ್ಟಲ್ಪಡುತ್ತಾ ಇದ್ದೀರಿ, ಮತ್ತು ಯೇಸು ಕ್ರಿಸ್ತನ ಮೂಲಕ ದೇವರಿಗೆ ಸರ್ಮಪಕವಾದ ಆತ್ಮೀಯ ಯಜ್ಞಗಳನ್ನು ಸಮರ್ಪಿಸುವದಕ್ಕೆ ಪವಿತ್ರ ಯಾಜಕವರ್ಗದವರಾಗಿದ್ದೀರಿ” (1 ಪೇತ್ರ 2:5).

ಪೌಲನು ತನ್ನ ಓದುಗರು **ದೇವರ ಆಲಯವಾಗಿ** ತಾವು **ಪರಿಶುದ್ದರಾಗಿರಬೇಕು**

ಎಂಬುದನ್ನು ತಿಳಿದುಕೊಳ್ಳಬೇಕು ಎಂದು ಬಯಸುತ್ತಾನೆ. ಅಪೊಸ್ತಲನು "ದೇವಾಲಯ" ಎಂಬ ಪದವನ್ನು ಬಹುಶಃ ಸಂಪೂರ್ಣ ಸಂಕೀರ್ಣವನ್ನು ಸೂಚಿಸಲು ಉಪಯೋಗಿಸಿರಬಹುದು, ಹೊಂದಿಕೊಂಡಿರುವ ಪರಿಶುದ್ಧ ಕ್ಷೇತ್ರದಲ್ಲಿ (ἱερόν, *hieron*) ಆಸ್ಥಾನ, ಆವರಣ ಮತ್ತು ಉಗ್ರಾಣಗಳನ್ನು ಒಳಗೊಂಡಿರಬಹುದು. ಬದಲಾಗಿ, ಆತನು ಒಳಗಣ ಪವಿತ್ರ ಸ್ಥಳ, ಪರಿಶುದ್ಧ ಸ್ಥಳ ಮತ್ತು ಅತೀ ಪರಿಶುದ್ಧವಾದ ಸ್ಥಳ (ναός, *naos*) ಅವುಗಳನ್ನು ಪ್ರತಿನಿಧಿಸುವ ಪದವಾಗಿ ಆರಿಸಿಕೊಂಡಿರಬಹುದು. ಕೊರಿಂಥದ ಕ್ರೈಸ್ತರು, ತಮ್ಮ ಪಾಪಗಳನ್ನು ತೊಳೆದುಕೊಳ್ಳುತ್ತಿದ್ದರು (ಅ.ಕೃ. 22:16) ನಿತ್ಯಜೀವಕ್ಕಾಗಿ ವಿಮೋಚಿಸಲ್ಪಟ್ಟು, ಪರಿಶುದ್ಧರಾಗಿದ್ದರು. ಇದೊಂದು ಆಶ್ಚರ್ಯಕರವಾದ ಪ್ರಕಟನೆ. ಸಾಮಾನ್ಯ ವೀಕ್ಷಕರು ಅವರನ್ನು ಬೇರೇನೂ ಅಲ್ಲ ಪರಿಶುದ್ಧರು ಎಂದು ತೀರ್ಮಾನಿಸುತ್ತಿದ್ದರು. ಅವರು ಒಡಕು ಹುಟ್ಟಿಸುವವರಾಗಿದ್ದರು. ಅವರು ಅಸಹ್ಯ ಪಾಪಗಳನ್ನು ತಮ್ಮ ಮನಸ್ಸಿನಲ್ಲಿ ತಾಳಿಕೊಂಡಿದ್ದರು (5:1). ಅವರಲ್ಲಿ ಕೆಲವರು ಬಾಗಶಃ ವಿಗ್ರಹಾರಾಧನೆಯಲ್ಲಿ ತೊಡಗಿಕೊಂಡಿದ್ದರು (8:10). ಅವರು ಪರಸ್ಪರರನ್ನು ದೂರುವದಕ್ಕಾಗಿ ಲೌಕಿಕ ನ್ಯಾಯಾಲಯಗಳನ್ನು ಉಪಯೋಗಿಸುವವರನ್ನು ಹೊರತುಪಡಿಸಿರಲಿಲ್ಲ (6:7). ಆದಾಗ್ಯೂ, ದೇವರು ಅವರನ್ನು ಪರಿಶುದ್ಧರನ್ನಾಗಿ ಮಾಡಿದ್ದನು, ಇದರಿಂದಾಗಿ ಅವರು ಪರಿಶುದ್ಧರಾಗಿದ್ದರು. ಕುರಿಮರಿಯ ರಕ್ತವು ದೇವರೊಂದಿಗೆ ಅವರ ಸಂಬಂಧವನ್ನು ಪರಿವರ್ತನೆಗೋಳಿಸಿತ್ತು. ಪೌಲನು ದೇವರು ಅವರನ್ನು ಸೃಷ್ಟಿಸಿರುವ ಹಾಗೆ ಪರಿಶುದ್ಧರಾದ ಜನರಂತೆ ಜೀವಿಸಬೇಕೆಂದು ಎಚ್ಚರಿಸುತ್ತಾನೆ.

## "ಎಲ್ಲಾ ಸಂಗತಿಗಳು ನಿನಗೇ ಸಂಬಂಧಿಸಿದವುಗಳಾಗಿವೆ" (3:18-23)

ಪೌಲನು ಕೊರಿಂಥದವರೊಂದಿಗೆ ಮೃದುವಾಗಿದ್ದನು ಅದನ್ನು ಬಿಟ್ಟರೆ ಬೇರೆನೂ ಇಲ್ಲ. ತಮ್ಮನ್ನು ತಾವು ಸುಶಿಕ್ಷಿತರು ಎಂದು ಹೆಮ್ಮೆಪಟ್ಟಿಕೊಳ್ಳುತಿದ್ದ ತತ್ವಜ್ಞಾನಿಗಳು ಕೊರಿಂಥದಲ್ಲಿರುವ ಸಾರ್ವಜನಿಕ ಸ್ಥಳಗಳಲ್ಲಿ, ಮೌಲ್ಯಮಾಪನ ಮಾಡಿಕೊಳ್ಳುತ್ತಿದ್ದರು, ಪೌಲನು ಅವರೊಂದಿಗೆ ನೇರವಾಗಿ ಮಾತನಾಡುತ್ತಾನೆ. 3:12ರಲ್ಲಿ, ಅವನು ಹೇಳಿರುವದರ ತಿರುಳು "ದೇವರಾತ್ಮನಿಂದ ನಡಿಸಿಕೊಳ್ಳುವವರಿಗೆ ತಕ್ಕಂತೆ ನಿಮ್ಮ ಸಂಗಡ ಮಾತನಾಡಲಾರದೆ, ಪ್ರಾಪಂಚಿಕರೂ ಕ್ರಿಸ್ತನ ವಿಷಯದಲ್ಲಿ ಎಳೆಗೂಸುಗಳು ಆಗಿರುವಂಥವರಿಗೆ ತಕ್ಕಂತೆ ನಿಮ್ಮ ಸಂಗಡ ಮಾತಾಡಬೇಕಾಯಿತು" ಎಂದು ಹೇಳುತ್ತಾನೆ. ಅಪೊಸ್ತಲನು ಯಾವ ಮನುಷ್ಯನ ಸ್ವ-ಪ್ರಾಮುಖ್ಯತೆಯನ್ನು ಗಂಭೀರವಾಗಿ ಪರಿಗಣಿಸಲಿಲ್ಲ, ಅವನು ತನ್ನ ಓದುಗರು ತಾವು ದೇವರಿಂದ ಕರೆಯಲ್ಪಟ್ಟವರು ಎಂಬುದನ್ನು ಮರೆತುಹೋಗಲು ಆಸ್ಪದ ಕೊಡಲಿಲ್ಲ. ಪೌಲನಿಗೆ ವ್ಯಾಖ್ಯಾನಿಸಲು ಯಾವ ವಿಷಯವೂ ಇರಲಿಲ್ಲ, ಕೊರಿಂಥದಲ್ಲಿರುವ ಈ ಸಮುದಾಯ ಆತ್ಮದಲ್ಲಿ ಬಂದಿತ್ತು ಮತ್ತು ದೇವರಿಗೆ ದೀನವಾಗಿ ಅದೀನಪಡೆಸುಕೊಳ್ಳುವದಕ್ಕೆ ಗುರುತಾಗಿತ್ತು. ಕರ್ತನ ಸಭೆಯ ಸದಸ್ಯರಾಗಿ, ಅವರೂ ಸಹ ಮನಸ್ಸಿನ ಐಕ್ಯತೆ ಮತ್ತು ನ್ಯಾಯತೀರ್ಪಿನಿಂದ (1:10) ಮತ್ತು ಹಂಚಿಕೊಂಡ ತಿಳುವಳಿಕೆ ಮತ್ತು ನಿರೀಕ್ಷೆಯಿಂದ ಗುರುತಿಸಲ್ಪಡಬೇಕು.

**[18]ಯಾವನೂ ತನ್ನನ್ನು ತಾನೇ ಮೋಸಗೊಳಿಸದಿರಲಿ ತಾನು ನಿಮ್ಮಲ್ಲಿ ಲೋಕ**

**ಸಂಬಂಧವಾಗಿ ಜ್ಞಾನಿ ಯಾಗಿದ್ದೇನೆಂದು ಭಾವಿಸಕೊಳ್ಳುವವನು ಜ್ಞಾನಿಯಾಗುವಂತೆ ಹುಚ್ಚನಾಗಲಿ. [19]ಯಾಕಂದರೆ ಇಹಲೋಕ ಜ್ಞಾನವು ದೇವರು ಮುಂದೆ ಹುಚ್ಚುತನವಾಗಿದೆ. ಆತನು ಜ್ಞಾನಿಗಳನ್ನು ಅವರ ತಂತ್ರಗಳಲ್ಲಿಯೇ ಹಿಡುಕೊಳ್ಳುತ್ತಾನೆಂತಲೂ [20]ಜ್ಞಾನಿಗಳ ಯೋಚನೆಗಳನು ನಿಶ್ಪಲವಾದವುಗಳೆಂದು ಕರ್ತನು ತಿಳುಕೊಳ್ಳುತ್ತಾನೆಂತಲೂ ಬರೆದಿದೆಯಲ್ಲ. [21]ಆದಕಾರಣ ಮನುಷ್ಯಮಾತ್ರದವರ ವಿಷಯದಲ್ಲಿ ಯಾರೂ ಹಿಗ್ಗದಿರಲಿ. ಯಾಕಂದರೆ ಸಮಸ್ತವೂ ನಿಮ್ಮದು; [22]ಪೌಲನಾಗಲಿ ಅಪೊಲ್ಲೋಸನಾಗಲಿ ಕೇಫನಾಗಲಿ, ಲೋಕವಾಗಲಿ ಜೀವವಾಗಲಿ ಮರಣವಾಗಲಿ, ಈಗಿನ ಸಂಗತಿಗಳಾಗಲಿ ಮುಂದಣ ಸಂಗತಿಗಳಾಗಲಿ ಸಮಸ್ತವೂ ನಿಮ್ಮದೇ; [23]ನೀವಂತೂ ಕ್ರಿಸ್ತನವರು, ಕ್ರಿಸ್ತನು ದೇವರವನು.**

**ವಚನ 18.** ಕ್ರಿಸ್ತನನ್ನು ಒಡೆಯನೆಂದು ಹೊಂದಿಕೊಳ್ಳುವದು ಕ್ರೈಸ್ತರನ್ನು ಮೋಸದಿಂದ ಮುಕ್ತಗೊಳಿಸುವದಿಲ್ಲ. ಒಬ್ಬನು ಇದಕ್ಕೆ ವಿರೋಧವಾಗಿ ಸಹ ವಾದಮಾಡಬಹುದು: ಕ್ರೈಸ್ತರು ವಿಚಿತ್ರವಾಗಿ ಮೋಸಕ್ಕೆ ನಮ್ರರಾಗಿರುತ್ತಾರೆ. ನಂಬಿಕೆಗೆ ವಿಶ್ವಾಸ ಪ್ರಾಮುಖ್ಯವಾದ ಅಂಶವಾಗಿದೆ. ಮಾತನಾಡುವ ಸಂದೇಶವಾಗಿ, ಸುವಾರ್ತೆ, ವಿಶ್ಲೇಷಣೆ ಮತ್ತು ತಿಳುವಳಿಕೆಗೆ ಕರೆ ನೀಡುತ್ತದೆ. ವಿಶ್ವಾಸಿಗಳು ಸುವಾರ್ತೆಯನ್ನು ಉತ್ತಮವಾಗಿ ಹೇಳುತ್ತಾರೋ, ಯಾರು ದುಷ್ಟರನ್ನು ಪಶ್ಚಾತ್ತಾಪ ಮತ್ತು ಯೇಸುವನ್ನು ಕರ್ತನೆಂದು ಅರಿಕೆ ಮಾಡಲು ಪ್ರೇರೆಪಿಸುತ್ತಾರೋ ಅವರನ್ನು ಮೆಚ್ಚಿಕೊಳ್ಳುವ ಪ್ರವೃತ್ತಿಯನ್ನು ಹೊಂದಿರುತ್ತಾರೆ. ಮೋಸಗಾರರು ಮತ್ತು ಅವಕಾಶವಾದಿಗಳು ಕೊರಿಂಥಲ್ಲಿ ಹೊರದೇಶದಲ್ಲಿದ್ದಾರೆ. ತಮ್ಮ ಮಾತುಗಳನ್ನು ರಹಸ್ಯಮಯ ವಾಕ್ಯಭಾಗಗಳಲ್ಲಿ ವ್ಯಕ್ತಪಡಿಸುತ್ತಾ ಜ್ಞಾನಿಗಳೆಂದು ನಟನೆಮಾಡುತ್ತಾರೆ, ಅವರು ಮೋಸಗೊಳಿಸಲು ಶಕ್ತರಾಗಿದ್ದಾರೆ. ಸಭೆಯ ಇತಿಹಾಸದುದ್ದಕ್ಕೂ ಇಂಥಹ ಜನರು ಇತರರನ್ನು ತಪ್ಪಾದ ದಾರಿಗೆ ನಡೆಸುವದನ್ನು ಮುಂದುವರೆಸಿದ್ದಾರೆ.

ಎರಡನೆಯ ಶತಮಾನದ ಮಧ್ಯದಲ್ಲಿ ಹಾಸ್ಯಗಾರ ಲೂಸಿಯನ್ "ಪೆರಿಗ್ರೀನಸ್ಸ" ಎಂಬವನ ಹೆಸರನ್ನು ಧರಿಸಿಕೊಂಡ ಒಬ್ಬ ತಂತ್ರಗಾರನ ಕಥೆಯನ್ನು ಹೇಳುತ್ತಾರೆ. ಲೂಸಿಯನ್ ಪೆರಿಗ್ರೀನಸ್ಸ ಹೇಗೆ ಕೈಸ್ತನಾದ ಮತ್ತು ಕೊಂಚ ಹೊತ್ತಿನಲ್ಲಿ, "ಅವರೆಲ್ಲರನ್ನು ಮಕ್ಕಳ ಹಾಗೆ ಕಾಣುವಂತೆ ಮಾಡಿದನು." ಅವನು ಅವರ ಪುಸ್ತಕಗಳನ್ನು ಅರ್ಥೈಸಿದನು ಮತ್ತು ತಾನೇ ಸ್ವತಃ ಪುಸ್ತಕಗಳನ್ನು ಬರೆದನು. ಪೆರಿಗ್ರಿನಸ್ಸನು ಸೆರೆಮನೆಗೆ ತಳ್ಳಲ್ಪಟ್ಟಾಗ, ಅವರ ಕ್ರೈಸ್ತ ಸಹೋದರ ಸಹೋದರಿಯರು "ಅವನನ್ನು ರಕ್ಷಿಸುವದಕ್ಕೆ ಮಾಡುವ ಯಾವ ಪತ್ರಗಳನ್ನು ಕೈಬಿಡಲಿಲ್ಲ." ಅವರು ಗಣನೀಯವಾದ ಮೊತ್ತದ ಹಣವನ್ನು ಸಂಗ್ರಹಿಸಿ ಅವನಿಗೆ ನೀಡಿದರು. ಲೂಸಿಯನ್ ಕ್ರೈಸ್ತರಲ್ಲಿ ಇರಬೇಕಾದ ಸಾಧುತ್ವವನ್ನು ಸಂಕ್ಷಿಪ್ತಗೊಳಿಸಿ ಈ ರೀತಿಯಾಗಿ ವರ್ಣಿಸಬಹುದು ಎಂದು ಹೇಳಿದನು: "ಆದುದರಿಂದ ಯಾವುದೇ ಕಪಟ ವೇಷದಾರಿ ಮತ್ತು ತಂತ್ರಗಾರ, ಸಂದರ್ಭದ ಲಾಭವನ್ನು ಪಡೆದುಕೊಳ್ಳಲು, ಅವರ ಮಧ್ಯದಲ್ಲಿ ಇದ್ದರೆ [ಕ್ರೈಸ್ತನು], ಅವನು ಬಹುಬೇಗನೇ ಸರಳ ಸಮೂಹದ ಮೇಲೆ ಒತ್ತಡ ತರುವದರ ಮೂಲಕ ಸಂಪತ್ತನ್ನು ಗಳಿಸುತ್ತಾನೆ."[9]

ಲೂಸಿಯನ್ ತನ್ನ ನಾಯಕರ ಮನೋರಂಜನೆಗಾಗಿ ಬಹಳ ಮಟ್ಟಿಗೆ ಉತ್ಪ್ರೇಕ್ಷಿಸಿಹೇಳಿದನು, ಆದರೆ ಆತನ ವರ್ಣನೆಯು ಕೆಲವು ವಿಶ್ವಾಸಿಗಳ ತಮ್ಮ ಅನಾನುಕೂಲಕರ ಭಾವನೆಯನ್ನು ತೊಡೆದು ಹಾಕುವದನ್ನು ಅನುಭವಿಸುವದಕ್ಕೆ

ಸಾಕಾಗಿತ್ತು. ಅವರನ್ನು ಪ್ರಶಂಸಿಸುವ ಹಾಗೆ, ಕ್ರೈಸ್ತರು ಕ್ಷಮಿಸುವವರು ಮತ್ತು ವಿಶ್ವಾಸವಿಡುವವರು ಆಗಿರಲು ಬಯಸುತ್ತಿದ್ದರು. ಅದೇ ಸಮಯದಲ್ಲಿ ಪೌಲನು ಇಂಥಹ ಗುಣಗಳನ್ನು ಪ್ರೋತ್ಸಾಹಿಸಿದನು, ಕೆಲವೊಂದು ಹಂತದಲ್ಲಿ ದೂರದೃಷ್ಟಿತ್ವ ಜಟಿಲ ಪ್ರಶ್ನೆಗಳನ್ನು ಕೇಳಬೇಕೆಂಬ ಬೇಡಿಕೆಯನ್ನು ಇಡುತ್ತದೆ. ಅಪೊಸ್ತಲನು ಕೊರಿಂಥದವರಿಗೆ ವಾಕ್ಚಾತುರ್ಯದಿಂದ ಮನಸೆಳೆಯುವದು, ಪ್ರಭಾವಶಾಲಿ ಭಾಷಣಕಾರನಾಗುವದು ಮತ್ತು ರಹಸ್ಯಮಯ ತತ್ವಶಾಸ್ತ್ರವು ಅವರು ತಮ್ಮನ್ನು ತಾವು ಮೋಸಕ್ಕೆ ಒಳಪಡಿಸುವದಾಗಿದೆ. ಯಾವನೂ ತನ್ನನ್ನು ತಾನೇ ಮೋಸಗೊಳಿಸದಿರಲಿ, ತಾನು ನಿಮ್ಮಲ್ಲಿ "ಆತ್ಮೀಕರೀತಿಯಲ್ಲಿ ಜ್ಞಾನೋದಯವದವರೊಂದಿಗೆ" ಇದ್ದೇನೆ, ಲೋಕ ಸಂಬಂಧವಾಗಿ ಜ್ಞಾನಿಯಾಗಿದ್ದೇನೆಂದು ಭಾವಿಸಿಕೊಳ್ಳುವವನು ಜ್ಞಾನಿಯಾಗುವಂತೆ ಹುಚ್ಚನಾಗಲಿ, **ಯಾಕಂದರೆ ಇಹಲೋಕದ ಜ್ಞಾನವು ದೇವರ ಮುಂದೆ ಹುಚ್ಚುತನವಾಗಿದೆ**.

**ವಚನ 19.** ಪೌಲನು ಹೇಳುತ್ತಾನೆ, ತಮ್ಮ ನಿಯಂತ್ರಣದಿಂದ ಆಚೆಗೆ ಇರುವ ಸಂಗತಿಗಳನ್ನು ಹಡ್ಡುತ್ತಾನೋ ಆಗ ದೇವರು, ಸಂತೋಷಪಡುತ್ತಾನೆ, ಪ್ರಭಾವಿತನಾಗುವದಿಲ್ಲ. ಒಂದು ರೀತಿಯ ಹಾಸ್ಯದ ಸ್ಪರ್ಶವಾಗಿದೆ, ಅಪೊಸ್ತಲನು ಈ **ಲೋಕದ ಒಂದು ವಿಧವಾದ ಜ್ಞಾನವನ್ನು** ಒಪ್ಪಿಕೊಳ್ಳುತ್ತಾನೆ, "ಈ ಕಾಲದ ಬುದ್ದಿವಂತರಿಗೆ" ಸಮಂಜಸವಾಗಿರುವ ಜ್ಞಾನ (3:18). ಇಂಥಹ ಜ್ಞಾನವು ತನ್ನ ಮಿತಿಯಲ್ಲ ಮುಗ್ದವಾಗಿದೆ. ಹ್ವವಳು ತಾನು ತೋಟದಲ್ಲಿರುವ ಎಲ್ಲಾ ಹಣ್ಣುಗಳನ್ನು ತಿಂದಾಗ್ಯೂ ಸಾಯುವದಿಲ್ಲ ಎಂಬುದನ್ನು ತಿಳಿದುಕೊಂಡ ಮೇಲೆ ಪ್ರಭಾವಿತಳಾದಳು (ಆದಿಕಾಂಡ 3:1-4). ಶೀನಾರ ಪ್ರದೇಶದಲ್ಲಿದ್ದ ಮನುಷ್ಯರು ಪರಲೋಕವನ್ನು ತಲುಪುವ ಗೋಪುರವನ್ನು ಕಟ್ಟಬೇಕು ಎಂಬ ಕೆಲಸಕ್ಕೆ ಕೈಹಾಕುವಾಗ ತಮ್ಮ ಕಾಲದ ಜ್ಞಾನದ ಮೇಲೆ ಆತುಕೊಂಡಿದ್ದರು (ಆದಿಕಾಂಡ 11:4). ಮಾನವನ ಈ ಕಥೆಯಲ್ಲಿ ದೇವರು ಅವರ ಭಾಷೆಯನ್ನು ತಾರು ಮಾರುಮಾಡಿದನು ಮತ್ತು ಅವರನ್ನು ಪರದೇಶಗಳಿಗೆ ಚದುರಿಸಿದನು. ಹಟಮಾರಿತನ ಮತ್ತು ಹೆಮ್ಮೆ ಅವರಿಗೆ ತಮ್ಮ ಸ್ವಂತ ಕಲಿಕೆ **ದೇವರ ಎದುರಿನಲ್ಲಿ ಮೂರ್ಖತನವಾಗಿದೆ** ಎಂಬುದನ್ನು ಮರೆಯುವಂತೆ ಮಾಡುತ್ತದೆ.

ಪೌಲನು ತನ್ನ ಎಚ್ಚರಿಕೆಯನ್ನು ಯೋಬ 5:13 ನ್ನು ಉಲ್ಲೇಖಿಸುವದರ ಮೂಲಕ ಒತ್ತು ನೀಡುತ್ತಾನೆ: **ಜ್ಞಾನಿಗಳನ್ನು ಅವರ ತಂತ್ರಗಳಲ್ಲಿಯೇ ಹಿಡುಕೊಳ್ಳುತ್ತಾನೆ.** ಈ ಮಾತುಗಳು ಯೋಬನ ಸ್ನೇಹಿತ ಎಲೀಫಜನ ಮಾತುಗಳಾಗಿವೆ. ಯೋಬನ ಗ್ರಂಥದಿಂದ ವಾಕ್ಯಭಾಗಗಳು ಹೊಸ ಒಡಂಬಡಿಕೆಯ ಹಲವು ಸ್ಥಳಗಳಲ್ಲಿ ಜೋಡಿಸಲ್ಪಟ್ಟಿವೆ, ಆದರೆ ಈ ಕೆಲಸವನ್ನು ಕೇವಲ ಮೂರು ಸಾರಿ ನೇರವಾಗಿ ಸೂಚಿಸಲಾಗಿದೆ. ಮೂರರಲ್ಲಿ ಎರಡು ಎಲೀಫಜನು ಹೇಳಿದವುಗಳಾಗಿವೆ (1 ಕೊರಿಂಥ 3:19 [ಯೋಬ 5:13]; ಇಬ್ರಿಯ 12:5 [ಯೋಬ 5:17]) ಮೂರನೆಯದು ದೇವರು ಯೋಬನಿಗೆ ಸಂಬೋಧಿಸಿದ್ದು (ರೋಮಾ 11:35 [ಯೋಬ 41:11; ಎಲೀಹುವಿನ ಮಾತುಗಳನ್ನು 35:7ರಲ್ಲಿ ನೋಡಿರಿ]). ವ್ಯಂಗೋಕ್ತಿ ಎಂದರೆ ಯೋಬನ ಸ್ನೇಹಿತರು ದೇವರ ಮಾರ್ಗಗಳನ್ನು ತಿಳಿದುಕೊಳ್ಳಲು ಮನುಷ್ಯನ ಅಸಮರ್ಥತೆಯನ್ನು ಅರಿಕೆ ಮಾಡಿದರು, ಆದಾಗ್ಯೂ ಅವರು ತಮಗೆ ಜ್ಞಾನದ ಕುರಿತು ಎಲ್ಲಾ ತಿಳಿದಿದೆ ಎನ್ನುವವರಂತೆ ಯೋಬನಿಗೆ ಸೂಚನೆ ನೀಡುವದನ್ನು ಮುಂದುವರೆಸಿದರು. ಅ ಮಟ್ಟದ ವರೆಗೆ ಯೋಬನ ಸ್ನೇಹಿತರು ತಮ್ಮ ಸ್ವಂತ ತಂತ್ರಗಳಲ್ಲಿ ಹಿಡಿಯಲ್ಪಟ್ಟಿದ್ದರು.

**ವಚನ 20.** ತನ್ನ ವಿಷಯಕ್ಕೆ ಮುಂದೆ ಒತ್ತು ನೀಡಲು, ಪೌಲನು ಕೀರ್ತನೆ 94:11 ಕ್ಕೆ ತಿರುಗಿಸುತ್ತಾನೆ. ಹೇಳಿಕೆಯು ಹಳೆಒಡಂಬಡಿಕೆಯ ಗ್ರೀಕ್ ಅನುವಾದವಾಗಿದೆ (ಕೀರ್ತನೆ 93:11; LXX), ಅಲ್ಲಿ ಅರ್ಥವು ಇಬ್ರಿಯ ಅರ್ಥಕ್ಕಿಂತ ಸ್ವಲ್ಪ ಬೇರೆಯಾಗಿದೆ. ಅಪೊಸ್ತಲನು ದೇವರು ತನ್ನ ವರ್ತನೆಗಳನ್ನು ಟೀಕಿಸುವ ಮನುಷ್ಯ ಪ್ರಯತ್ನಗಳನ್ನು ಗಮನಿಸುತ್ತಾನೆ ಎಂಬುದನ್ನು ದೃಢಪಡಿಸುತ್ತಾನೆ. ಮನುಷ್ಯನು ಧೈರ್ಯವಂತನಾಗಿ ಮತ್ತು ಆತನ ಪ್ರಕಟನೆಗಳನ್ನು ಬದಿಗಿಡುವಾಗ, ಅವರ ವಿವೇಚನೆಯು . . . ನಿರುಪಯುಕ್ತವಾಗುತ್ತದೆ ಎಂಬುದು ಆತನಿಗೆ ತಿಳಿದದೆ. ಪೌಲನು ಶಿಕ್ಷಣ ಮತ್ತು ಕುತೂಹಲ ದೇವರಿಗೆ ಪಾಪವಾಗಿದೆ ಎಂದು ಸೂಚಿಸುವದಿಲ್ಲ. ಬದಲಾಗಿ, ಆತನು - ಯಾವಾಗ ಜನರು ತಮ್ಮ ವಿವೇಚನೆಯ ಕೊನೆಯ ಹಂತಕ್ಕೆ ಬರುತ್ತಾರೋ, ಯಾವಾಗ ತಾಂತ್ರಿಕ ಪ್ರಗತಿ ಮತ್ತು ವಿದ್ಯುನ್ಮಾನ ಶಾಸ್ತ್ರದ ಮೇಧಾವಿಗಳು ಅಸ್ತಿತ್ವದ ರಹಸ್ಯವನ್ನು ಬರಿದುಮಾಡಿದ್ದಾರೋ ಆವಾಗ ಈ ಪದಗಳನ್ನು "ಆದಿಯಲ್ಲಿ ದೇವರ ಸೃಷ್ಟಿಸಿದನು (ಆದಿಕಾಂಡ 1:1) ಎಂಬುದನ್ನು ಹೊರತು ಪಡಿಸಿ ಬೇರೆ ಯಾವದೇ ವಿವರಣೆಯನ್ನು ಕಂಡುಕೊಳ್ಳುವದಿಲ್ಲ.

**ವಚನ 21.** ಪೌಲನಿಂದ ನೀಡಲ್ಪಟ್ಟ ಎಚ್ಚರಿಕೆ ಅಮೂರ್ತವೂ ಅಲ್ಲ ಇಲ್ಲವೇ ಶೈಕ್ಷಣಿಕವಾದದ್ದೂ ಅಲ್ಲ. ಕೆಲವರು ಜನರನ್ನು "ಅವರ ತಂತ್ರಗಳಲ್ಲಿಯೇ" ದೇವರು "ಹಿಡಿಯುತ್ತಾನೆ" ಎಂಬುದಾಗಿ ಅಲ್ಲ. ಆತನು ಕೊರಿಂಥದಲ್ಲಿರುವ ಕ್ರೈಸ್ತರನ್ನು ಹಿಡಿಯುವ ಪ್ರಕ್ರಿಯೆಯಲ್ಲಿದ್ದಾನೆ, ಅವರು ಮನುಷ್ಯನಲ್ಲಿ ಹೊಗಳಿಕೊಳ್ಳುವದರಿಂದಾಗಿ **ತಮ್ಮ ಶೋಧನೆಗಳಲ್ಲಿ ಬಲಿಯಾಗುತ್ತಾರೆ**. ಪೌಲನು ಅವರಿಗೆ ಜ್ಞಾಪಿಸುತ್ತಾನೆ, "ದೇವರ ಆಲಯವು ಪರಿಶುದ್ಧವಾಗಿರುವದರಿಂದ, ಅದು ನೀವಾಗಿದ್ದೀರಿ" (3:17). ಅಪೊಸ್ತಲನು ವಯಕ್ತಿಕವಾಗಿ ಮಾತನಾಡುತ್ತಾನೆ. ಕೊರಿಂಥದವರು ಹೊಂದಿಕೊಳ್ಳಲು ಬಯಸುವ ಯಾವ ಜ್ಞಾನವೂ ದೇವರು ಅವರನ್ನು ಕ್ರಿಸ್ತನಲ್ಲಿ ಏನಾಗಿರಬೇಕೆಂದು ಸೃಷ್ಟಿಸಿದ್ದಾನೊ ಅದಕ್ಕೆ ಹೋಲಿಸಲಾಗುವದಿಲ್ಲ. ಅವರು ವಿಮೋಚಿಸಲ್ಪಟ್ಟವರು, ಆಯಲ್ಪಟ್ಟವರು, ದೇವ ಜನರು ಆಗಿದ್ದಾರೆ. ಅವರಿಗೆ ದೇವರ ಹೋಲಿಸಲಾರದ ವರಗಳ ಯೋಗ್ಯತೆಯನ್ನು ಗುರಿತಿಸಲು ದೃಷ್ಟಿಕೋನ ಮತ್ತು ದೀನತೆ ಇರಬೇಕು. ಕ್ರೈಸ್ತರು, ಪೌಲನು ಹೇಳುವ ಹಾಗೆ, **ಎಲ್ಲಾ ಸಂಗತಿಗಳು ಅವಗಾಗಿಯೇ ಇವೇ** ಯಾಕಂದರೆ ಅವರು ದೇವರ ಆಲಯವಾಗಿದ್ದಾರೆ.

**ವಚನ 22.** ಕೊರಿಂಥದ ಕ್ರೈಸ್ತರು **ಪೌಲನಾಗಲಿ ಅಥವಾ ಅಪೊಲ್ಲೋಸನಾಗಲಿ ಅಥವಾ ಕೇಫನಾಗಲಿ** ಅವರ ಸೇವೆ ಮಾಡಿದ್ದರಿಂದ ಅವರು ಆಶೀರ್ವಾದ ಹೊಂದಿದವರಾಗಿದ್ದರು. ಸೇವಕರು ಅಂದರೆ ಒಂದು ರೀತಿಯಲ್ಲಿ ಸೇವೆ ಮಾಡುವವರ ಸೊತ್ತಾಗಿದ್ದಾರೆ. ಸುಶಿಕ್ಷಿತ, ಮಾರ್ಮಿಕವಾದ ಕಲಿಯುವಿಕೆ "ಶರೀರಾಧೀನ ಸ್ವಭಾವದವರ" ಎದುರಿನಲ್ಲಿ ಸ್ಥಾನಮಾನವನ್ನು ನೀಡಬಹುದು (3:1), ಆದರೆ ಯಾರು ಕ್ರಿಸ್ತನ ಆತ್ಮನಲ್ಲಿ ಲೀನರಾಗಿರುತ್ತಾರೋ ಅವರು ಅನಂತಕಾಲಕ್ಕೂ ಸೇವಕರಾಗುವದಕ್ಕೆ ಹೆಚ್ಚು ಯೋಗ್ಯವಾಗಿರುತ್ತದೆ. 1:12 ಮತ್ತು 3:22 ರಲ್ಲಿರುವ ಆ ಮೂರು ಜನರ ಉಲ್ಲೇಖ ಮೊದಲ ಮೂರು ಅದ್ಯಾಯಗಳಲ್ಲಿ ಪೌಲನ ಅನೇಕ ಎಚ್ಚರಿಕೆಗಳಿಗೆ ಮಹತ್ವವನ್ನು ನೀಡುತ್ತದೆ. ಯಾಕಂದರೆ ಕೊರಿಂಥದವರು ತಮ್ಮ ಬೋಧಕರಿಂದ ಮಾರ್ಗದರ್ಶನವನ್ನು ಹೊಂದಿದ್ದರು, ಅವರು **ಎಲ್ಲಾ ಸಂಗತಿಗಳನ್ನು** ಹೊಂದಿಕೊಂಡಿದ್ದರು. ಅವರು ತಿಳಿದಿರುವದು ಏನಂದರೆ ತಾವು ಯಾರಾಗಿದ್ದೇವೆ ಮತ್ತು ತಮಗೆ ಬೋಧಿಸಿದವರೊಂದಿಗೆ ತಾವು ಯಾವ

ಬೆಳವಣಿಗೆಯನ್ನು ಹೊಂದಿದ್ದೇವೆ ಎಂಬುದು. **ಅದು ಪ್ರಾಪಂಚಿಕವಾದದ್ದೋ ಅಥವಾ ಜೀವ ಅಥವಾ ಮರಣಕರವಾದದ್ದೋ ಅಥವಾ ಪ್ರಸ್ತುತ ಸಂಗತಿಗಳೋ ಅಥವಾ ಭವಿಷ್ಯತ್ತಿನ ಸಂಗತಿಗಳೋ**.

1:12ರಲ್ಲಿ ಇರುವಂತೆ ಕೇಫನ ಉಲ್ಲೇಖವು 3:22ರಲ್ಲಿ, ಗೊಂದಲಕ್ಕೊಳಗಾಗುತ್ತದೆ. ಕೊರಿಂಥದಲ್ಲಿ ಪೇತ್ರನು ತಾನೇ ಸಮಯವನ್ನು ಕಳೆದನೋ? ಬಹುಶಃ, ಕೊರಿಂಥದಲ್ಲಿ ಸುವಾರ್ತೆಯನ್ನು ನೆಡುವ ಕಾರ್ಯವನ್ನು ಪೌಲನು ಉಲ್ಲೇಖಿಸುವಾಗ, ನಿರೇರದವನು ಅಪೊಲ್ಲೋಸನು, ಪೇತ್ರನಲ್ಲ. ಅದೇ ಸಮಯದಲ್ಲಿ ಕೊರಿಂಥದಲ್ಲಿರುವ ಕ್ರೈಸ್ತರು ಅಪೊಲ್ಲೋಸನನ್ನು ವಯಕ್ತಿಕವಾಗಿ ಬಲ್ಲವರಾಗಿದ್ದರು (ಅ.ಕೃ. 18:24, 27; 1 ಕೊರಿಂಥ 16:12), ಅವರು ಕೇಫನನ್ನು ವಯಕ್ತಿಕವಾಗಿ ಬಲ್ಲವರಾಗಿದ್ದರು ಎಂಬುದು ಸ್ಪಷ್ಟವಾಗಿಲ್ಲ. ಹ್ಯಾಗೂ ಅವಮ ಹೆಸರು ಸಭೆಯಲ್ಲಿ ಪಂಗಡಗಳಾಗಿ ವಿಭಜಿನೆಯಲ್ಲಿ ಉದ್ಭವಿಸದೇ, ಪೌಲನು ಏಕೆ ಪೇತ್ರನ ಹೆಸರನ್ನು ಉಲ್ಲೇಖಿಸಿದನು ಎಂಬುದನ್ನು ವಿವರಿಸುವದು ಕಠಿಣವಾಗಿದೆ. ಪೇತ್ರನ ಹೆಸರನ್ನು ತೆಗೆದುಕೊಳ್ಳಲು ತಿಳುವಳಿಕೆಯ ಅವಶ್ಯಕತೆ ಇಲ್ಲ ಅಥವಾ ಅಪೊಸ್ತಲನ ಒಪ್ಪಿಗೆಯ ಅವಶ್ಯಕತೆಯಿಲ್ಲ.

ಆಕಸ್ಮಿಕವಾಗಿ ಕೊರಿಂಥದವರಿಗೆ ಬರೆದ ಪತ್ರಗಳಲ್ಲಿ ಬರೆದ ಶರಾ ಯೆಹೂದ್ಯ ವಿಶ್ವಾಸಿಗಳು ಪೌಲನ ಗೈರುಹಾಜರಿಯಲ್ಲಿ ಯೆರೂಸಲೇಮಿನಿಂದ ಕೊರಿಂಥಕ್ಕೆ ಬಂದಿರಬಹುದು, ಹಿಂದಿನ ಸಮಯದಲ್ಲಿ ಅಂತಿಯೋಕ್ಯಕ್ಕೆ ಅವರು ಹೋಗಿರುವ ಹಾಗೆ (ಅ.ಕೃ. 15:1). ಅವರು ಯೆಹೂದೇತರ ವಿಶ್ವಾಸಿಗಳನ್ನು ಮೋಶೆಯ ಧರ್ಮಶಾಸ್ತ್ರದ ನಿಯಮಗಳನ್ನು ಅಪ್ಪಿಕೊಳ್ಳಲು ಹೇಳಿದರು. ಅಂತಿಯೋಕ್ಯದಲ್ಲಿರುವ ಬೋಧಕರು ಯಾಕೋಬನಿಂದ ಅಧಿಕಾರವನ್ನು ಕೇಳಿಕೊಂಡ ಹಾಗೆ (ಗಲಾತ್ಯ 2:12), ಕೊರಿಂಥದಲ್ಲಿ ಅದೇರೀತಿಯ ಬೋಧಕರು ಪೇತ್ರನಿಂದ ಅಧಿಕಾರವನ್ನು ಕೇಳಿಪಡೆದುಕೊಂಡರು ಎಂದು ತೋರುತ್ತದೆ. ಅವರು ಧರ್ಮಶಾಸ್ತ್ರದ ಕುರಿತು ಆಸಕ್ತಿಯುಳ್ಳವರಾಗಿದ್ದರು, ಯೆರೂಸಲೇಮಿನಲ್ಲಿ ಫರಿಸಾಯರ ಪಂಗಡಕ್ಕೆ ಸಂಬಂಧಿಸಿದ ವಿಶ್ವಾಸಿಗಳು ಇದ್ದ ಹಾಗೆ (ಅ.ಕೃ. 15:5; 21:20 ನೋಡಿರಿ). ಯೂದಾಯದ ಬೋಧಕರು ಕೊರಿಂಥದಲ್ಲಿ ಗಲಿಬಿಲಿಗೆ ಕಾರಣರಾಗಿರಬಹುದು ಅವರು ಗಲಾತ್ಯ ಸಭೆಗಳನ್ನು ಸೋಸಿತೆಗೆದ ಹಾಗೆ, ಕೇಫನಿಂದ ಅಧಿಕಾರವನ್ನು ಕೇಳಿಕೊಂಡರು. ನಿಜವಾಗಿಯೂ, ಕೇಫನು ಅವರನ್ನು ಎಂದಿಗೂ ಅಪ್ಪಿಕೊಳ್ಳಲಿಲ್ಲ. ಕೆಲವು ಕಾರಣದಿಂದಾಗಿ, ಪೌಲನು ಯೆಹೂದ್ಯ ಕ್ರೈಸ್ತ ಬೋಧಕರನ್ನು ತನ್ನ ಮೊದಲನೆಯ ಪತ್ರದಲ್ಲಿ ನೇರವಾಗಿ ಎದುರಿಸಲಿಲ್ಲ, ಅವನು 2 ಕೊರಿಂಥದವರಿಗೆ ಬರೆದ ಪತ್ರವನ್ನು ಬರೆಯುವಾಗ ಈ ಸಂಗತಿಯನ್ನು ಸಂಬೋಧಿಸುತ್ತಾನೆ (2 ಕೊರಿಂಥ 3:13, 14). ಇಂಥಹ ಬೋಧಕರು ಬಹಳ ಮಟ್ಟಿಗೆ ಪೌಲನು ಇವರೊಂದಿಗೆ ತೃಪ್ತಿಪಟ್ಟುಕೊಳ್ಳಬೇಕಾದ ಸುಳ್ಳು ಅಪೊಸ್ತಲರು ಆಗಿದ್ದರು.

**ವಚನ 23.** ಕೊರಿಂಥದ ವಿಶ್ವಾಸಿಗಳ ಮಧ್ಯದಲ್ಲಿ ಅವರು ತಮ್ಮನ್ನು ತಾವು ಅಧೀನ ಪಡಿಸಿಕೊಳ್ಳುವವರೆಗೆ ಅವರಲ್ಲಿ ಐಕ್ಯತೆ ಇರಲಿಲ್ಲ, ಅವರು ತಮ್ಮ ಜ್ಞಾನ, ತಮ್ಮ ಅಪೊಸ್ತಲ ಬೋಧಕರನ್ನು ಸಹ ತಮ್ಮನ್ನು ರಕ್ಷಿಸಿದ ಕರ್ತನಿಗೆ ಸಮರ್ಪಿಸಿಕೊಳ್ಳಲಿಲ್ಲ. ಪೌಲನು “ಎಲ್ಲಾ ಸಂಗತಿಗಳು ನಿನಗೆ ಸಂಬಂಧಿಸಿವೆ” (3:22) ಎಂದು ಬರೆಯುವಾಗ ಸಭೆಯು ತನ್ನ ಮಾತುಗಳನ್ನು ವಯಕ್ತಿಕವಾಗಿ ತೆಗದುಕೊಳ್ಳಬೇಕು ಎಂದು ಪೌಲನು ಬಯಸಿದ್ದನು.

ಯಾವುದೇ ನಿಷ್ಠೆ ಪೌಲನಿಗಾಗಲಿ ಅಥವಾ ಯಾವುದೇ ಬೋಧಕರಿಗೆ ಹೋಲಿಸಿದರೆ ಸರಳ ವಿಷಯ ಹೀಗಿದೆ: **ನೀವು ಕ್ರಿಸ್ತನಿಗೆ ಸಂಬಂಧಿಸಿದವರಾಗಿದ್ದೀರಿ.** ಅವರು ಐಕ್ಯತೆಯಲ್ಲಿರುವ ಜನರಾಗಿದ್ದಾರೆ ಯಾಕಂದರೆ ಅವರು ಕ್ರಿಸ್ತನಿಗೆ ಸಂಬಂಧಿಸಿರುವವರಾಗಿರುವದನ್ನು ಸರಳವಾದ ಸಂಗತಿಗಳಿಗೆ ಹೋಲಿಸಿದಾಗ ಹೀಗಿದೆ ನೀವು ಕ್ರಿಸ್ತನಿಗೆ ಸಂಬಂಧಿಸಿದವರಾಗಿದ್ದೀರಿ. ಅವರು ಐಕ್ಯತೆಯಲ್ಲಿರುವ ಜನರಾಗಿದ್ದಾರೆ ಯಾಕಂದರೆ ಅವರು ಕ್ರಿಸ್ತನವರಾಗಿದ್ದಾರೆ. ಕ್ರಿಸ್ತನಿಗೆ ಸಂಬಂಧಿಸಿದವರು ಎಂದರೆ ಅವರು ದೇವರಿಗೆ ಸಂಬಂಧಿಸಿದವರಾಗಿದ್ದಾರೆ ಯಾಕಂದರೆ **ಕ್ರಿಸ್ತನು ದೇವರಿಗೆ ಸಂಬಂಧಿಸಿದವನಾಗಿದ್ದಾನೆ.** ತಂದೆ ಮತ್ತು ಮಗನಲ್ಲಿರುವ ಐಕ್ಯತೆ ಕೊರಿಂಥದಲ್ಲಿರುವ ಕ್ರೈಸ್ತರಿಗೆ ಆಂತರಿಕ ಜಗಳಗಳನ್ನು ಬದಿಗಿಟ್ಟು ಪರಲೋಕ ಕ್ಷೇತ್ರದಲ್ಲಿರುವ ಗುಣಲಕ್ಷಣಗಳಾದ ಐಕ್ಯತೆಯನ್ನು ಅಪ್ಪಿಕೊಳ್ಳವದು ಅವಶ್ಯವಾಗಿದೆ.

## ಅನ್ವಯಿಸುವಿಕೆಗಳು

### ಶರೀರಾಧೀನ ಸ್ವಭಾವದಲ್ಲಿ ಜೀವಿಸುವದರ ಪರಿಣಾಮಗಳು (3:1-3)

ಪೌಲನು, ಕೊರಿಂಥದಲ್ಲಿರುವ ಕ್ರೈಸ್ತರನ್ನು "ಶರೀರಾಧೀನಸ್ವಭಾವದವರು" ಎಂದು ಸಂಬೋಧಿಸುವದು ಅವಶ್ಯವಾಗಿದೆ ಎಂದು ಅರಿಕೆ ಮಾಡುತ್ತಾನೆ. ಅವರ ನಡತೆಯು ಅವರು "ಇನ್ನೂ ಶರೀರಾಧೀನಸ್ವಭಾವದವರಾಗಿದ್ದಾರೆ" ಎಂಬುದಕ್ಕೆ ಸಾಕ್ಷಿಯಾಗಿದೆ. ಅವರು ಸಣ್ಣ ಹೊಟ್ಟೆಕಿಚ್ಚುಗಳನ್ನು ತಮ್ಮ ನಡುವೆ ಅಡೆತಡೆಗಳನ್ನು ಹಾಕುವದಕ್ಕೆ ಅನುಮತಿಸುತ್ತಿದ್ದಾರೆ. ಜಗಳಗಳು ಸಹೋದರ ಪ್ರೀತಿಯನ್ನು ನಾಶಮಾಡುತ್ತಿವೆ; ಎಳೆಗೂಸುಗಳ ವರ್ತನೆ ಅವರ ಸಮಾಧಾನವನ್ನು ಕದಿಯುತ್ತಿದೆ.

ಕ್ರೈಸ್ತರು ಶರೀರಾಧೀನ ಸ್ವಾಭಾವಕ್ಕೆ ಅನುಸಾರವಾಗಿ ಜೀವಿಸುವದನ್ನು, ಕಳ್ಳತನ, ಕುಡಿಕತನ, ಮಾದಕದ್ರವ್ಯಗಳ ವ್ಯಸನ ಮತ್ತು ವ್ಯಭಿಚಾರದಂತ ಪಾಪಗಳೊಂದಿಗೆ ಜೀವಿಸುತ್ತಿದ್ದಾರೆ. ಇಂಥಹ ನಡೆತೆ ಖಂಡಿತವಾಗಿ ಗುಣಯೋಗ್ಯಪಡಿಸುತ್ತದೆ. ಅನೇಕ ಸಣ್ಣ ಪಾಪಗಳೆಂದು ಪರಿಗಣಿಸ ಆಚರಿಸಲಾಗುತ್ತಿರುವ ಪಾಪಗಳನ್ನು ಪೌಲನು ಸಂಬೋಧಿಸುತ್ತಾನೆ. ಇಂಥಹ "ಸಣ್ಣ" ಪಾಪಗಳು ಸ್ವಾರ್ಥ ವೈರಿಗಳಾಗಿವೆ, ಕರುಣೆಯಿಲ್ಲದ ನಡತೆ ಮತ್ತು ವಿಚಾರಹೀನ ಹರಟೆಮಾತು ಸ್ವ-ನಾಶನದ ನಡತೆಗಿಂತ ದೇಹದ ಐಕ್ಯತೆಗೆ ಇನ್ನು ಹೆಚ್ಚು ಅಪಾಯವನ್ನು ಉಂಟುಮಾಡುತ್ತವೆ. ಪೌಲನು ಕ್ರೈಸ್ತರಿಗೆ "ವಿನಯ ಸಾತ್ವಕತ್ವಗಳಿಂದಲೂ ದೀರ್ಘಶಾಂತಿಯಿಂದಲೂ ಕೂಡಿದವರಾಗಿ" ಪ್ರೀತಿಯಿಂದ ಒಬ್ಬರನ್ನೊಬ್ಬರು ಸಹಿಸಿಕೊಳ್ಳಿರಿ ಎಂದು ಬೇಡಿಕೊಳ್ಳುತ್ತಾನೆ (ಎಫೆಸ 4:2). ಕೊಲೆಸ್ಸೆಯವರಿಗೆ ಹೀಗೆ ಬರೆಯುತ್ತಾನೆ, "ಈಗಲಾದರೋ ಕ್ರೋಧ ಕೋಪ, ಮತ್ಸರ ದೂಷಣೆ ಬಾಯಿಂದ ಹೊರಡುವ ದುರ್ಭಾಷೆ ಇವುಗಳನ್ನು ವಿಸರ್ಜಿಸಿಬಿಡಿರಿ" (ಕೊಲಸ್ಸೆ 3:8).

### ಸಭೆ ಮತ್ತು ಅದರ ನಾಯಕರು (3:4-9)

ಯಾರು ಕುಳಿತುಕೊಂಡು ಪ್ರಸಂಗಿಗಳನ್ನು ಅನೇಕ ವರ್ಷಗಳ ಕಾಲ ಆಲಿಸುತ್ತಾರೋ ಅವರು ತಮಗೆ ಅರಿವಿಲ್ಲದೇ ಅವರೊಂದಿಗೆ ಗುರತಿಸಿಕೊಳ್ಳಲು ಪ್ರಾರಂಭಿಸುತ್ತಾರೆ

ಎಂಬುದನ್ನು ಅಧ್ಯಯನಗಳು ಸೂಚಿಸುತ್ತವೆ. ಜನರು ಗುರುತಿಸಿಕೊಳ್ಳುವದು ಪ್ರವೃತ್ತಿಯಲ್ಲಿ ಪ್ರಸಂಗಿಗಳಾಗಿರುವವರ ಏಕೈಕ ಸೊತ್ತಲ್ಲ. ನಾಯಕರು ಮತ್ತು ನಿಷ್ಠೆ ಹಲವು ದಿಕ್ಕುಗಳಿಂದ ಬರುತ್ತದೆ. ಜನರು ತಾವು ವಾಸಿಸುವ ಪಟ್ಟಣ ಅಥವಾ ದೇಶದ ಸ್ಥಾನಿಕ ಕ್ರೀಡಾ ತಂಡಗಳೊಂದಿಗೆ ಮತ್ತು ಚುನಾಯಿತರಾದ ಸರಕಾರದ ಪ್ರತಿನಿಧಿಗಳೊಂದಿಗೆ ನಿಷ್ಠೆಯಿಂದ ಇರುತ್ತಾರೆ.

ಆದುದರಿಂದ, ಸಭೆಗೆ ದೇವರ ವಾಕ್ಯವನ್ನು ಪ್ರಕಟಿಸುವವರನ್ನು ಉನ್ನತಸ್ಥಾನದಲ್ಲಿ ಯೋಚಿಸುವ ಕ್ರೈಸ್ತರು ಆಶ್ಚರ್ಯಕರವೇನಲ್ಲ. ವಯಕ್ತಿಕ ಪ್ರಶಂಸೆ, ಮೆಚ್ಚಿಕೆ ಅಥವಾ ನಿಷ್ಠೆ, ಹ್ಯಾಗೂ ಅತಿರೇಕಕ್ಕೆ ಹೋಗುವಾಗ ಸಮಸ್ಯೆಯಾಗಬಹುದು. ಒಂದು ಸನ್ನಿವೇಶದಲ್ಲಿ ಪೇತ್ರನು (ಅ.ಕೃ. 10:25, 26), ಮತ್ತು ಪೌಲ ಮತ್ತು ಬಾರ್ನಬರು ಇನ್ನೊಂದರಲ್ಲಿ (ಅ.ಕೃ. 14:14, 15) ತಮ್ಮ ಶೋತೃಗಳು ತಮ್ಮನ್ನು ಗೌರವಿಸುವಾಗ ಭಯಪಟ್ಟರು. ಕೊರಿಂಥದಲ್ಲಿರುವ ಕ್ರೈಸ್ತರು ವಯಕ್ತಿಕ ಮೆಚ್ಚಿಕೆ ಮತ್ತು ನಿಷ್ಠೆಯ ಆಧಾರದ ಮೇಲೆ ಪಂಗಡಗಳನ್ನು ರಚಿಸುವ ಮಟ್ಟಕ್ಕೆ ಬೋಧಕರನ್ನು ಏರಿಸಿದರು. ಪೌಲನಾಗಲಿ ಅಪೊಲ್ಲೋಸನಾಗಲಿ ಇಂತಹ ಪಂಗಡಗಳನ್ನು ಪ್ರೋತ್ಸಾಹಿಸಲು ಏನೂ ಮಾಡಲಿಲ್ಲ. ಪೌಲನಿಗೆ ಆದ್ಯತೆಯನ್ನು ನೀಡಿದವರಲ್ಲಿ ಅವನಿಗೆ ಆದ್ಯ ಸ್ಥಾನವಿದೆ; ಪಟ್ಟಣದಲ್ಲಿ ಅವನು ಮೊದಲು ಕ್ರಿಸ್ತನನ್ನು ಪ್ರಕಟಿಸಿದನು ಎಂದು ವಾದಿಸಿದರು. ಸರ್ವಾಧಿಕಾರಿಗಳು ಅವನು ವಾಕ್ಚಾತುರ್ಯದ ಕೊರತೆಯನ್ನು (2 ಕೊರಿಂಥ 11:6) ಮತ್ತು ವಯಕ್ತಿಕ ವರಗಳನ್ನು (2 ಕೊರಿಂಥ 10:10) ಹೊಂದಿದ್ದಾನೆ ಎಂದು ಹೇಳಿದರು.ಅಪೊಲ್ಲೋಸನು ಇನ್ನೊಂದು ವಿಧದಲ್ಲಿ, ವಿದ್ಯಾವಂತನು ಮತ್ತು ಪ್ರಭಾವಬೀರುವಂತೆ ಮಾತನಾಡುವವನು ಆಗಿದ್ದನು (ಅ.ಕೃ. 18:24).

ಒಬ್ಬ ಪ್ರಸಂಗಿಗಿಂತ ಇನ್ನೊಬ್ಬ ಪ್ರಸಂಗಿಗಳಿಗೆ ವಯಕ್ತಿಕವಾಗಿ ಆದ್ಯತೆಯನ್ನು ನೀಡುವದರಿಂದ ಕೆಲವೊಮ್ಮೆ ವಿಭಾಗಿಸುವ ಶಕ್ತಿಗಳು ಸಭೆಯಲ್ಲಿ ಬೆಳೆಯುತ್ತವೆ. ಒಂದು ಹಂತದಲ್ಲಿ ಆದ್ಯತೆಯಲ್ಲಿ ವ್ಯತ್ಯಾಸವನ್ನು ತಿಳಿದುಕೊಳ್ಳಬಹುದಾಗಿದೆ. ವಯಕ್ತಿಕ ಕ್ರೈಸ್ತರು ಹಲವು ವಿಧಗಳಲ್ಲಿ ಕಲಿಯುತ್ತಾರೆ ಮತ್ತು ಸ್ವಾಭಾವಿಕವಾಗಿ ವಿವಿಧ ಬೋಧನೆಯ ಶೈಲಿಗಳಿಂದ ಲಾಭವನ್ನು ಹೊಂದುತ್ತಾರೆ. ಇದರಿಂದ ಸಭೆಯಲ್ಲಿ ಗುಂಪುಗಳಾಗದಿದ್ದಲ್ಲಿ ಏನೂ ಅಪಾಯವಾಗುವದಿಲ್ಲ. ಕೊರಿಂಥದವರಿಗೆ ಪೌಲನು ಬರೆದ ಪತ್ರದಲ್ಲಿ, ಕ್ರಿಸ್ತನು ಕ್ರೈಸ್ತ ನಂಬಿಕೆಯ ಕೇಂದ್ರಬಿಂದುವಾಗಿದ್ದಾನೆ. ಅವನ ಮೇಲಿರುವ ನಿಷ್ಠೆ ಉಳಿದೆಲವುಗಳನ್ನು ಮೀರಿಸುತ್ತದೆ. ದೇಹದ ಐಕ್ಯತೆಗಾಗಿ ವಯಕ್ತಿಕ ಆದ್ಯತೆಗಳನ್ನು ಬದಿಗಿರಸಬೇಕು.

## ಸಭೆಯು ದೇವರ ಆಲಯವಾಗಿದೆ (3:10-23)

ಸಮಾಜವಾದಿಗಳು ಆಧುನಿಕ-ದಿನಗಳ ಪಾಶ್ಚಿಮಾತ್ಯ ಲೋಕವು ತಮ್ಮ ವಯಕ್ತಿಕತೆಯಲ್ಲಿ ಅತಿರೇಕಕ್ಕೆ ಹೋಗುತ್ತಿದೆ ಎಂದು ಹೇಳುತ್ತಾರೆ. ವ್ಯಕ್ತಿಗಳು ತಮ್ಮ ಸಮುದಾಯದ ಜವಾಬ್ದಾರಿಗಳನ್ನು ಅಲಕ್ಷಿಸುತ್ತಿರುವದನ್ನು ತೀವ್ರಗೊಳಿಸುತ್ತಿವೆ. ನಾಗರಿಕ ಗುಂಪುಗಳು ಸಮಸ್ಯೆಯನ್ನು ಆಕರ್ಷಿಸುವ ಸದಸ್ಯರನ್ನು ಒಳಗೊಂಡಿದೆ ಮತ್ತು ಸರಕಾರದಲ್ಲಿ ಸಾರ್ವಜನಿಕ ಸೇವೆ ಜನಪ್ರಿಯತೆಯಲ್ಲಿ ಅವನತಿಯನ್ನು ಹೊಂದುತ್ತಾ ಇದೆ. ಜನರು ಪರದೆಯ ಮೇಲೆ ನೋಡಲು, ದೂರವಾಣಿಯಲ್ಲಿ ಮಾತನಾಡಲು, ಗಣಕಯಂತ್ರದಲ್ಲಿ ಮತ್ತು

ಇತರ ವಿದ್ಯುನ್ಮಾನ ಸಾಧನಗಳನ್ನು ನೋಡುವದರಲ್ಲಿ ಹೆಚ್ಚು ಹೆಚ್ಚು ಸಮಯವನ್ನು ಕಳೆಯುತ್ತಾರೆ. ಹಾಸ್ಯಾಸ್ಪದಾಗಿ, ಅದೇ ಸಮಯದಲ್ಲಿ ವಿಶಾಲವಾಗಿ ಹರಡಿರುವ "ಸಮಾಜಿಕ ಮಾಧ್ಯಮದ" ಉಪಯೋಗ ಒಂದು ವಿಧದಲ್ಲಿ ಜನರನ್ನು ಒಟ್ಟಾಗಿ ಸೇರಿಸುತ್ತಿದೆ, ಇದು ಜನರನ್ನು ಒಬ್ಬರೊರಿಂದ ಒಬ್ಬರು ದೂರವಿರುವಂತೆ ಮಾಡುತ್ತದೆ ಮತ್ತು ಮಾನವ ಸಂವಹನವನ್ನು ಕಡಿಮೆ ಮಾಡುತ್ತದೆ.

ಯೇಸು ಕ್ರಿಸ್ತನ ಸಭೆ ಹೆಚ್ಚಾಗಿ ಸಾಮಾನ್ಯ ನಂಬಿಕೆ ಮತ್ತು ಕೊಡಲ್ಪಟ್ಟಂತ ಜೀವಿತದಲ್ಲಿ ಸಮರ್ಪಣೆಯನ್ನು ಹಂಚಿಕೊಳ್ಳುವ ಸಮುದಾಯಕ್ಕಿಂತ ಹೆಚ್ಚಿನದಾಗಿದೆ. ಎಲ್ಲಾದರೊಟ್ಟಿಗೆ ಸಭೆ, ಒಂದು ಸಮಾಜಿಕ ಅಂತರಜಾಲವಾಗಿದೆ. ಇತರ ಸಂಸ್ಥೆಗಳಂತೆ ಇದು ತನ್ನ ಅಸ್ತಿತ್ವಕ್ಕಾಗಿ ಸಾಮಾಜಿಕ ತೊಡಗಿಸುವಿಕೆಯನ್ನು ಅವಲಂಬಿಸಿದೆ, ವಯಕ್ತಿಕತೆ ಪ್ರತ್ಯೇಕಿಸಿಕೊಳ್ಳುವ ಪರಿಣಾಮವನ್ನು ಹೊಂದುವಾಗ ಸಭೆಯು ತೊಂದರೆಗೆ ಒಳಗಾಗುತ್ತದೆ. ಆ ಸಮಯಗಳಲ್ಲಿ ಆತ್ಮನಿಗೆ ಅಳವಡಿಸಿಕೊಳ್ಳುವದು ಒಂದು ಹಂತದ ವರೆಗೆ ಮಾತ್ರ ಸಾಧ್ಯವಾಗುತ್ತದೆ. ಉದಾಹರಣೆಗೆ, ಸುವಾರ್ತಾಸೇವೆ ಅನೇಕಾವರ್ತಿ ವಯಕ್ತಿಕ ನಿವೇದನೆಯ ಮೂಲಕ ಪ್ರಾರಂಭವಾಗುತ್ತದೆ: "ನೀವು ರಕ್ಷಣೆಹೊಂದಲು ಬಯಸುತ್ತಿರೋ?" ಕೆಲವು ಸೌವಾರ್ತಿಕರು ಕೇಳುತ್ತಾರೆ. "ನೀವು ಮಾಡಬೇಕಾದದ್ದು ಏನಂದರೆ ಪಾಪಿಗಳ ಪ್ರಾರ್ಥನೆಯನ್ನು ಹೇಳಿರಿ ಮತ್ತು ಯೇಸು ನಿಮ್ಮ ಹೃದಯದಲ್ಲಿ ಬರಲಿ." ಇಂಥಹ ಒಂದು ಬೇಡಿಕೆ ಪೇತ್ರನಿಗೆ, ಪೌಲನಿಗೆ ಮತ್ತು ಹೊಸ ಒಡಂಬಡಿಕೆಯ ಇತರ ಲೇಖಕರಿಗೆ ವಿಚಿತ್ರವಾಗಿ ತೋರಿಬಂತು. ಪೌಲನು ಕೇಂದ್ರ ಸ್ಥಾನಗಳಲ್ಲಿ ಮತ್ತು ಬೀದಿಗಳ ತಿರುವಿನಲ್ಲಿ ಬೋಧಿಸಿದನು. ಜನರಿಗೆ ಪಶ್ಚಾತ್ತಾಪ ಮತ್ತು ದೀಕ್ಷಾಸ್ನಾನದ ಕುರಿತಾಗಿ ಬೋಧಿಸಿದನು (ಗಲಾತ್ಯ 3:27 ನೋಡಿರಿ). ಅವನು ಆಲಿಸುವವರಿಗೆ, ದೇವರ ಮಗನಾದ ಕ್ರಿಸ್ತನಲ್ಲಿ ನಂಬಿಕೆ ಮತ್ತು ಕ್ರಿಸ್ತನಲ್ಲಿ ದೀಕ್ಷಾಸ್ನಾನದ, ಕೆಳಗಿನ ಸಾರ್ವಜನಿಕ ವ್ಯಾಖ್ಯಾನವನ್ನು ಹೇಳಿದನು, ಕರ್ತನು ರಕ್ಷಣೆ ಹೊಂದಿದವರನ್ನು ದೇಹವೆಂಬ ಸಭೆಗೆ ಸೇರಿಸುತ್ತಾನೆ. ಕ್ರಿಸ್ತನೊಂದಿಗೆ ಜೀವನ ಎಂದರೆ ಸಮುದಾಯದ ಜೀವಿತ; ಇದರ ಅರ್ಥ ಸಭೆಯ ಜೀವಿತ.

ರಕ್ಷಣೆಯನ್ನು ಹೊಂದಿದ ನಂತರ ಖಾಸಗಿಗಿಂತ ಹೆಚ್ಚಾಗಿ ಯೇಸುವನ್ನು ಹೃದಯದಲ್ಲಿ ಸೇರಿಸಿಕೊಳ್ಳುವದು ವಯಕ್ತಿಕ ಕ್ರಿಯೆಯಾಗಿದೆ. ಸುವಾರ್ತೆಗೆ ವಿಧೇಯರಾಗುವದರೊಟ್ಟಿಗೆ, ಜನರೊಂದಿಗೆ ಒಂದಾಗಿ - ಅವರೊಂದಿಗೆ ಹಂಚಿಕೊಳ್ಳುವದು, ಅವರಿಂದ ಪ್ರೋತ್ಸಾಹವನ್ನು ಹೊಂದುವದು ಮತ್ತು ಅವರಿಂದ ತಿದ್ದಿಸಿಕೊಳ್ಳುವದಾಗಿದೆ. ಪ್ರತಿಯೊಬ್ಬ ಸದಸ್ಯನು ಸಭೆಯ ಸಾಮಾಜಿಕ ಅಂತರಜಾಲದ ಜನರಿಗೆ ಕೊಡುತ್ತಾನೆ ಮತ್ತು ಹೊಂದಿಕೊಳ್ಳುತ್ತಾನೆ.

ಕೊರಿಂಥದಲ್ಲಿರುವ ಸಭೆಯು ತಾವು ಪರಸ್ಪರ ಸದಸ್ಯರಾಗಿದ್ದೇವೆ ಎಂಬುದನ್ನು ಪಟ್ಟಣದಲ್ಲಿದ್ದ ಜನರು ಮರೆತುಹೋಗುವ ಮಟ್ಟಿಗೆ ತೊಂದರೆಗೆ ಒಳಗಾದರು. ಸಮೂಹವಾಗಿ, ಅವರು ದೇವರ ಜನರಾಗಿದ್ದಾರೆ, ದೇವರ ಆಲಯವಾಗಿದ್ದಾರೆ. ದೇವರು ತನ್ನ ಆಲಯದಲ್ಲಿ ವಾಸಿಸುತ್ತಾನೆ. ಅಪೊಸ್ತಲನು ಒಬ್ಬ ಮನುಷ್ಯನು ಕ್ರಿಸ್ತನ ದೇಹದಲ್ಲಿ ಸೇರಿಸಲ್ಪಡದವರೆಗೆ ಯಾವುದೇ ಜೀವಿತ ಸಾಧ್ಯವಿಲ್ಲ, ಮತ್ತು ಯಾವುದೇ ವಾಸಸ್ಥಳ ಒಬ್ಬ ವ್ಯಕ್ತಿಯಲ್ಲಿ ಸಂಭವಿಸಲು ಸಾಧ್ಯವಿಲ್ಲ ಎಂದು ಹೇಳಲು ಧೈರ್ಯಮಾಡುತ್ತಾನೆ. ಸಭೆಯು ಸಮರ್ಪಣೆಮಾಡಿಕೊಂಡಿರುವ ವ್ಯಕ್ತಿಗಳು ಹಂಚಿಕೊಳ್ಳುವ ನಂಬಿಕೆಯನ್ನು ಆಧರಿಸಿ ಅಭಿವೃದ್ಧಿಯಾಗುತ್ತದೆ ಅಥವಾ ಅವನತಿಹೊಂದುತ್ತದೆ.

ನಾನು ಹೈಸ್ಕೂಲ್‌ನಲ್ಲಿ ಓದುತ್ತಿರುವಾಗ, ವಿಜ್ಞಾನ ವಿಷಯದಲ್ಲಿ ಆನಂದಿಸುತ್ತಿದೆ. ನಾನು ಕೊಡಲ್ಪಟ್ಟ ಗಣಿತ, ರಸಾಯನ ಶಾಸ್ತ್ರ ಮತ್ತು ಭೌತಶಾಸ್ತ್ರ ವಿಷಯಗಳಲ್ಲಿ ಎಲ್ಲಾ ಪ್ರಗತಿಪರ ಕೋರ್ಸ್‌ಗಳನ್ನು ತೆಗೆದುಕೊಂಡೆನು. ರಸಾಯನ ಶಾಸ್ತ್ರದ ಒಬ್ಬ ಅತಿಥಿ ಉಪನ್ಯಾಸಕರು ಒಂದು ದಿನ ಮಾಡಿತೋರಿಸುವ ತರಗತಿಯನ್ನು ನಡೆಸಿದರು ಅದನ್ನು ನಾನು ಎಂದಿಗೂ ಮರೆಯುವದಿಲ್ಲ. ಅವರು ಗಾಜಿನ ಜಾಡಿಯನ್ನು ತೆಗೆದುಕೊಂಡರು. ಅದು ಸಾಮಾನ್ಯ ಜಾಡಿಯಂತೆ ಕಾಣುತಿತ್ತು. ಅವರು ಗಾಜು ವಿಶೇಷವಾದ ತಂತ್ರಜ್ಞಾನದೊಂದಿಗೆ ಬಿರುಸಾಗಿ ಮಾಡಲ್ಪಟ್ಟಿದೆ ಎಂಬುದನ್ನು ವಿವರಿಸಿದರು. ಇದನ್ನು ಪ್ರದರ್ಶಿಸಲು ಅವರು ಸುತ್ತಿಗೆಯನ್ನು ಉಪಯೋಗಿಸಿದರು. ತಮ್ಮ ಕೈಗಳನ್ನು ಮೇಲಕ್ಕೆ ಎತ್ತಿ, ಅವುಗಳನ್ನು ಒಟ್ಟಾಗಿ ಗಟ್ಟಿಯಾಗಿ ಹಿಡಿದುಕೊಳ್ಳಲು ಎರಡು ಹಲಿಗೆಗಳ ಮೂಲಕ ಒಂದು ದೊಡ್ಡ ಮೊಳೆಯನ್ನು ಜಡಿದರು. ನಂತರ ಅವರು ಆ ಜಾಡಿಯನ್ನು ಎತ್ತಿದರು ಒಂದು ಸಣ್ಣ ಲೋಹದ ತುಂಡನ್ನು ತೆಗೆದುಕೊಂಡು ಆ ಜಾಡಿಯಲ್ಲಿ ಹಾಕಿದರು. ಅದು ಸಾವಿರಾರು ತುಂಡುಗಳಾಗಿ ಹರಡಿಕೊಂಡಿತು. ಅವರು ಕಸಬರಿಗೆಯನ್ನು ತೆಗೆದುಕೊಂಡು ತುಂಡುಗಳನ್ನು ಕೂಡಿಸಿದರು. ಉದಿದ-ಗಾಜಿನ ಪಾತ್ರೆಗಳು ಸಾಂಪ್ರದಾಯಿಕ ವಿಧದಲ್ಲಿ ತಂಪಾಗಿಸದಿದ್ದಲ್ಲಿ ಹೊರಗಿನ ಭಾಗದಲ್ಲಿ ಅತೀಯಾಗಿ ಗಟ್ಟಿಯಾಗುತ್ತವೆ ಆದಾಗ್ಯೂ ಒಳಗಿನ ಭಾಗದಲ್ಲಿ ನಾಜೂಕಾಗುತ್ತವೆ.

ಆ ಪ್ರದರ್ಶನ ನನ್ನ ಮನಸ್ಸಿನಲ್ಲಿ ಅನೇಕ ಸಮಯ ಪುನರಾವರ್ತನೆಯಾಯಿತು. ನಾನು ಸತ್ಯವನ್ನು ಬೋಧಿಸುವದರಲ್ಲಿ ಸ್ಥಿರವಾಗಿರುವ ಸಭೆಗಳನ್ನು ನೋಡಿದ್ದೇನೆ ಮತ್ತು ಹೊರಗಿನ ಒತ್ತಡಗಳನ್ನು ಎದುರಿಸುವ ಸಾಮರ್ಥ್ಯವನ್ನು ಹೊಂದಿರುವದನ್ನು ಆದರೆ ಒಳಗಿನಿಂದ ಹರಿದುಹೋಗಿರುವದನ್ನು ನೋಡಿದ್ದೇನೆ. ಒಂದು ಸಭೆಯು ಯಾವಾಗ ಹೊರಗಿನ ಶಕ್ತಿಗಳನ್ನು ಎದುರಿಸುತ್ತದೋ ಮತ್ತು ಹಾಗಿದ್ದಾಗಲೂ ಆಂತರಿಕ ಆಕ್ರಮಣಗಳನ್ನು ಎದುರಿಸಲು ಅವಕಾಶವನ್ನು ನೀಡುತ್ತದೋ ಆಗ ಸುತ್ತಿಗೆಯಂತೆ ಬಲವಾಗಿರಲು ಸಾಧ್ಯ. ಕೊರಿಂಥದಲ್ಲಿರುವ ಸಭೆ ಪೌಲನ ಕಣ್ಣೆದುರಿನಲ್ಲಿಯೇ - ಒಡೆದು ಹೋಗುತ್ತಾ ಇದೆ, ಅವರು ಕ್ರಿಸ್ತನ ಸಿದ್ಧಾಂತಗಳನ್ನು ಬಿಟ್ಟು ಬಿಟ್ಟಿದ್ದರಿಂದ ಅಲ್ಲ, ಆದರೆ ಸ್ವಾರ್ಥತೆ, ಹೆಮ್ಮೆ ಮತ್ತು ಹೊಟ್ಟೆಕಿಚ್ಚು ಎಂಬ “ಬೆಳ್ಳಿ” ಅವರ ಅನ್ಯೋನ್ಯತೆಯನ್ನು ಒಳಗಿನಿಂದ ನಾಶಮಾಡುತ್ತಿದೆ.

---

**ಟಿಪ್ಪಣಿಗಳು**

[1]J. A. Motyer, “ಶಾರೀರಿಕ” ಸೌವಾರ್ತಿಕ ದೈವಶಾಸ್ತ್ರದ ಶಬ್ದಕೋಶದಲ್ಲಿ, 2ನೇಯ ಆವೃತ್ತಿ, Walter A. Elwell (Grand Rapids, Mich.: Baker Academic, 2001), 455. [2]19ನೇ ಶತಮಾನದ ಮಧ್ಯದಲ್ಲಿ, ಹೆಸರಾಂತ ಶಾಲೆ F.C. Baur ಅವರಿಂದ ಜರ್ಮನಿಯಲ್ಲಿ ಪ್ರಾರಂಭವಾಯಿತು, 1 ಕೊರಿಂಥದವರಿಗೆ ಆಧಿ ಸಭೆಯಲ್ಲಿ ವಿಭಾಗಗಳ ವೈರತ್ವ ಎಲ್ಲಾಕಡೆ ಸಮಸ್ಯೆಯನ್ನು ಉಂಟು ಮಾಡುತಿತ್ತು ಎಂಬುದನ್ನು ಸಾಕ್ಷಿಕರಿಸಿತು ಎಂದು ಹೇಳುವದರ ಮೂಲಕ ತನ್ನ ಪಥಕ್ರಮಣವನ್ನು ಆರಂಭಿಸಿತು. ವಿಷಯದ ಪ್ರಕಾರ ಪೇತ್ರನು, ಕ್ರೈಸ್ತತ್ವದ ಕುರಿತು ಯೆಹೂದ್ಯರ ಸಂಕುಚಿತ ತಿಳುವಳಿಕೆಯನ್ನು ಪ್ರತಿಪಾದಿಸಿದನು, ಅದೇ ಸಮಯದಲ್ಲಿ ಪೌಲನು ಸುವಾರ್ತೆಯು ಜಾಗತಿಕ ವ್ಯಾಪ್ತಿಯನ್ನು ಹೊಂದಲಿ ಎಂದು ಹೋರಾಡಿದನು. ಬಾಉರ್ ಅಪೊಸ್ತಲರ ಕೃತ್ಯಗಳು ಅಪೊಸ್ತಲರ ಮಧ್ಯದಲ್ಲಿ ಇರುವ ಈ ಭಿನ್ನತೆಯನ್ನು ಸರಿಪಡಿಸಲು ಬರೆಯಲ್ಪಟ್ಟಿದೆ ಎಂದು ದೃಢಪಡಿಸುತ್ತಾರೆ. ಆದುನೀಕರಣಗೊಳಿಸಿದ ವಿಧದಲ್ಲಿ, ಪ್ರಭಾವಶಾಲಿಯಾಗಿ ಮುಂದುವರೆದಿದೆ. W. Ward Gasque, *A History of the Interpretation of the Acts of the Apostles* (Peabody, Mass.: Hendrickson Publishers,

1989), 27–30, ನಲ್ಲಿ ಇದನ್ನು ಚರ್ಚಿಸಲಾಗಿದೆ. [3]1 ಯೋಹಾನ 1:1 ಹೋಲಿಸಿರಿ, ಸಂಬಂಧವಾಚಕ ಸರ್ವನಾಮ ನಪೂಸಕಲಿಂಗ ಕ್ರಿಸ್ತನಿಗೆ ಉಲ್ಲೇಖಿಸಲಾಗಿದೆ: "ಆದಿಯಲ್ಲಿ ಇದ್ದದ್ದು" ಒಬ್ಬನು ಓದಲು ಹೀಗೆ ಅಪೇಕ್ಷಿಸಬಹುದು "ಆದಿಯಿಂದ ಇದ್ದವನು". [4]ಗ್ರೋಡಾನ್ ಡಿ. ಫೀ, ಕೊರಿಂಥದವರಿಗೆ ಮೊದಲನೆಯ ಪತ್ರಿಕೆ, ದ ನ್ಯೂ ಇಂಡರ್‌ನ್ಯಾಶನಲ್ ಹೊಸ ಒಡಂಬಡಿಕೆಯ ಕಮೆಂಟರಿ (Grand Rapids, Mich.: Wm. B. Eerdmans Publishing Co., 1987), 128. [5]ನಜರೇತಿನ ಜನರು ಯೇಸುವಿನ ಕುರಿತು ಹೀಗೆ ಹೇಳಿದರು "ಬಡಗಿಯ ಮಗ"; τέκτων (*tektōn*, ಮತ್ತಾಯ 13:55). ಪದವನ್ನು ಸಾಮಾನ್ಯವಾಗಿ "ಬಡಗಿ" ಎಂದು ಅನುವಾದಿಸಲಾಗಿದೆ. ಯೇಸು ಬಡಗಿಯಾಗಿರಬಹುದು, ಆದರೆ ಪದವು. ಈ ಪದವನ್ನು ಕಲ್ಲು ಕಟೆಯುವವನಿಗೂ ಅನ್ವಯಿಸಬಹುದು. [6]ಜೋಸೆಫ ಜೇಕಬ್, ಕೊಲ್ಲ, "ಮೂರು ಸಣ್ಣ ಹಂದಿಗಳು," *ಇಂಗ್ಲೀಷನಲ್ಲಿರುವ ದಂತ ಕಥೆಗಳು* (ಲಂಡನ್: ಡೆವಿಡ್ ನುಟ್ಟ, 1890) 68-72. [7]James D. G. Dunn, *ಅಪೊಸ್ತಲನಾದ ಪೌಲನ ದೈವಶಾಸ್ತ್ರ* (Grand Rapids, Mich.: Wm. B. Eerdmans Publishing Co., 1998), 491. [8]Richard B. Hays, *ಹೊಸ ಒಡಂಬಡಿಕೆಯ ನೈತಿಕ ದರ್ಶನ: ಸಮುದಯ, ಕ್ರೂಜೆ, ನೂತನ ಸೃಷ್ಟಿ* (San Francisco: Harper-SanFrancisco, 1996), 32. [9]ಲೂಸಿಯನ್ *ಪೆರಿಗ್ರಿನಸ್ಸನ್ ಮರಣಾನಂತರ* 11-13.